ಶ್ರೀ ಅಪ್ಪಾಜಿ ನಾಡಗೌಡ (ಸರ್ಕಾರದ ಸಚೇತಕರು) :- ಅಧ್ಯಕ್ಷರೇ, ಮಾನ್ಯ ರಾಣಿ ಸತೀಶ್‌ರವರದು ಸಣ್ಣದೊಂದು ತಿದ್ದುಪಡಿ ಇದೆ, ಇದನ್ನು ತೆಗೆದುಕೊಂಡು ಬಿಡಿ.

ಅಧ್ಯಕ್ಷರು:- ಆಗಬಹುದು. ನನ್ನದೇನೂ ಅಭ್ಯಂತರವಿಲ್ಲ, ಆದರೆ ಮಾನ್ಯ ವಿರೋಧ ಪಕ್ಷದವರು ಸಿಇಟಿ ವಿಷಯವನ್ನೇ ತೆಗೆದುಕೊಳ್ಳೋಣ ಎನ್ನುತ್ತಿದ್ದಾರೆ. ರಾಣಿ ಸತೀಶ್‌ರವರದ್ದನ್ನು ನಾಳೆ ತೆಗೆದುಕೊಳ್ಳೋಣ. ಈಗ ಸಿಇಟಿ ಮೇಲಿನ ಚರ್ಚೆ

(5) ನಿಯಮ 69ರ ಮೇರೆಗೆ

ಸಿ.ಇ.ಟಿ.ಗೆ ಸಂಬಂಧಪಟ್ಟಂತೆ ಚರ್ಚೆ

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ) :- ಮಾನ್ಯ ಅಧ್ಯಕ್ಷರೇ ಬಹಳ ವಿಚಿತ್ರವಾದ ಸನ್ನಿವೇಶದಲ್ಲಿ ಸಿಇಟಿ ಕುರಿತಾದ ಚರ್ಚೆಯನ್ನು ಇವತ್ತು ಈ ಸದನದಲ್ಲಿ ನಾವು ಪ್ರಾರಂಭ ಮಾಡುತ್ತಿದ್ದೇವೆ. ಈ ಚರ್ಚೆ ಇವತ್ತೇನು ರಾಜ್ಯದಲ್ಲಿ ಲಕ್ಷಾಂತರ ಕುಟುಂಬಗಳಿವೆ ಅದರಲ್ಲಿ ಬಹಳ ಆಕಾಂಕ್ಷಿ ಯುವಕ ಯುವತಿಯರಿದ್ದಾರೆ. ಜೊತೆಗೆ ಅವರಿಗೆ ಪ್ರತಿಭೆ ಕೂಡ ಇದೆ. ಅವರಿಗೆ ಜೀವನದಲ್ಲಿ ನಾನೇನೋ ಆಗಬೇಕು. ನಾನೂ ಒಂದು Professional course ಗೆ ಸೇರಬೇಕು ಅಂತ ಬಹಳ ಹಂಬಲ ಇರುತ್ತದೆ ಅವರ ಭವಿಷ್ಯದ ದೃಷ್ಟಿಯಿಂದ ಅವರಿಗೆ ಭರವಸೆ ಕೊಡುವುದಕ್ಕಾಗಿ ನಾವು ಇಲ್ಲಿ ಚರ್ಚೆ ಮಾಡುತ್ತಿರುವುದು ಈ ಸದನ ಇಡೀ ನಾಡಿಗೆ ಒಂದು ಸಂದೇಶವನ್ನು ಕಳಿಸಬೇಕು. ರಾಜ್ಯ ಸರ್ಕಾರ ಹಾಗೂ ಸದನ ನಾವು ನಿಮ್ಮ ಜೊತೆ ಇದ್ದೇವೆ, ನಿಮಗೆ ಯಾವುದೇ ಅನ್ಯಾಯವಾಗುವುದಕ್ಕೆ ನಾವು ಬಿಡುವುದಿಲ್ಲ, ನಿಮ್ಮ ಪ್ರತಿಭೆಗೆ ಜೊತೆಗೆ ನಿಮ್ಮ ಸಾಮಾಜಿಕ ನ್ಯಾಯಕ್ಕೆ ನಾವು ಅವಕಾಶ ಕೊಡುತ್ತೇವೆ ಎಂಬ ಸಂದೇಶವನ್ನು ಈ ಸದನದಿಂದ ನಾವು ಇವತ್ತು ಕಳುಹಿಸಬೇಕಾಗಿದೆ. ಅಧ್ಯಕ್ಷರೇ, ನಾನು ಹೇಳಿದೆ ವಿಚಿತ್ರ ಸನ್ನಿವೇಶದಲ್ಲಿ ನಾವು ಈ ಚರ್ಚೆಯನ್ನು ನಡೆಸುತ್ತಿದ್ದೇವೆ ಅಂತ.

(ವೈಸ್ ಚೇರ್ಮನ್ (ಶ್ರೀ ಕೆ.ಬಿ. ಮಲ್ಲಿಕಾರ್ಜುನ್) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಸ್ವಾಮಿ ಅಧ್ಯಕ್ಷರೇ, ತಾವು ಇರುವುದಿಲ್ಲವೇ? ನೀವಿದ್ದಿದ್ದರೆ ಸ್ಫೂರ್ತಿ ಸಿಗುತ್ತಿತ್ತು.

ಅಧ್ಯಕ್ಷರು :- ಒಳಗಡೆಯಿಂದ ನಿಮ್ಮ ಮಾತು ಕೇಳುತ್ತೇನೆ. ಇವರಿರುತ್ತಾರಲ್ಲಾ

ಶ್ರೀ ಎಸ್. ಸುರೇಶ್ ಕುಮಾರ್ :- ಆಗಾಗ ಸ್ಕೋರ್ ಎಷ್ಟಾಯಿತು ಅಂತ ಸ್ವಲ್ಪ ಚೀಟಿ ಕಳುಹಿಸಿ ಅಧ್ಯಕ್ಷರೇ, 2002ರ ಅಕ್ಟೋಬರ್ 31ರಂದು ಸುಪ್ರೀಂ ಕೋರ್ಟಿನ ತೀರ್ಪು, ಯಾವ ತೀರ್ಪಿನಿಂದ ನಮ್ಮ ರಾಜ್ಯದ ವಿದ್ಯಾರ್ಥಿ ಪೋಷಕರಲ್ಲಿ ಒಂದು ರೀತಿಯ ಅಘಾತವಾಗಿದೆ ಆ ತೀರ್ಪು ಹೊರಬಂತು. ಅದಕ್ಕೆ ರಿವ್ಯೂ ಪಿಟಿಷನ್ ಹಾಕಬಹುದಾಗಿತ್ತು. ಆ ಅವಧಿ ಕೂಡ ಇವತ್ತು ಆಗಿಹೋಗಿಬಿಟ್ಟಿದೆ. ನಾಲ್ಕೂವರೆ ತಿಂಗಳ ನಂತರ ಈ ಸದನದಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಸರ್ಕಾರ ಮತ್ತು So called managment ಅಥವಾ So called ಸರ್ಕಾರ ಮತ್ತು ಚರ್ಚೆ ಮ್ಯಾನೇಜ್‌ಮೆಂಟ್ ನಡುವೆ ಮೂರು ಸುತ್ತು ಈಗಾಗಲೇ ನಡೆದುಹೋಗಿಬ್ಬಿಟದೆ. ಆ ಮ್ಯಾನೇಜ್‌ಮೆಂಟಿನವರು ಹೇಳುತ್ತಾರೆ, ನಾವು ನಮ್ಮ ವೈದ್ಯಕೀಯ ಕಾಲೇಜುಗಳಲ್ಲಿ ಒಂದೇ ಒಂದು ಸೀಟು ಕೊಡುವುದಿಲ್ಲ. ಬೇಕಾದರೆ ಇಂಜಿನಿಯರಿಂಗ್ ಕೇಳಿ, 20 ಪರ್ಸೆಂಟ್ ಬೇಕಾದರೆ ಕೊಡುತ್ತೇವೆ ಅಂತ ಅವರು ಇವತ್ತು ಹೇಳುತ್ತಿದ್ದಾರೆ. ಇದರ ನಡುವೆ ನಮ್ಮ ರಾಜ್ಯ ಸರ್ಕಾರ ಮಹಾಭಾರತದಲ್ಲಿ ಉತ್ತರ ಕುಮಾರ ಬರುತ್ತಾನಲ್ಲಾ ಆ ಉತ್ತರ ಕುಮಾರ ಹೇಗಿದ್ದ ಎಂಬುದನ್ನು

ಈ ರಾಜ್ಯ ಸರ್ಕಾರ ತೋರಿಸುತ್ತಿದೆ. ರಾಜ್ಯ ಸರ್ಕಾರ ಅನೌನ್ಸ್ ಮಾಡಿದೆ: ಸಿಇಟಿ ಪರೀಕ್ಷೆ ನಾವು ಮಾಡಿಬಿಡುತ್ತೇವೆ ಅಂತ. 15-3-2003 ಸಿಇಟಿ ಪರೀಕ್ಷೆಗಳಿಗೆ ಡಿಡಿ ಸಲ್ಲಿಸಲು ಕೊನೆಯ ದಿನವೆಂದು ಘೋಷಿಸಲಾಗಿದೆ. 10-4-2003 application ಸಲ್ಲಿಸಲು ಕೊನೆಯ ದಿನ, 30,31-5-2003 CET ಪರೀಕ್ಷಾ ದಿನಗಳು ಅಂತ ನೀವು ಘೋಷಿಸಿಬಿಟ್ಟಿದ್ದೀರಿ. ಆದರೆ ಸೀಟುಗಳ ಸಂಖ್ಯೆ ಎಷ್ಟು ಯಾವ ಕಾಲೇಜಿನಲ್ಲಿ ಎಷ್ಟು ಸೀಟಿದೆ, ಯಾವ ಕಾಲೇಜಿನಲ್ಲಿ ಯಾವ್ಯಾವ ಕೋರ್ಸುಗಳಿಗೆ ಎಷ್ಟೆಷ್ಟು ಸೀಟು ಕೊಡುತ್ತಾ ಇದ್ದೀರಿ - ಇದ್ಯಾವುದೂ ಕೂಡ ಹೊರಗಡೆ ಪ್ರಕಟವಾಗಿಲ್ಲ. ಒಂದು ರೀತಿ ನನಗನ್ನಿಸುವುದುಃ ಸರ್ಕಾರ ಯಾವ ಬ್ರಿಡ್ಜ್ ಕಟ್ಟಬೇಕು ಅಂತ ಹೇಳದೇನೆ ಎಲ್ಲಿಗೆ ಟಾರ್ ಹಾಕಬೇಕೂಂತ ಹೇಳದೇನೆ ಟೆಂಡರ್ ಕರೆದುಬಿಟ್ಟಿದೆ, ಆ ಟೆಂಡರ್‌ನಲ್ಲಿ ಯಾವ ಕಾಮಗಾರಿ ಅಂತಾನೇ ಹೇಳಿಲ್ಲ. ಇವತ್ತು ಸಿಇಟೀದು ಕೂಡ ಅದೇ ಪರಿಸ್ಥಿತಿ. ಎಷ್ಟು ಸೀಟು ಅಂತ ಗೊತ್ತಿಲ್ಲ ಯಾವ ಕಾಲೇಜು ಎಂದು ಗೊತ್ತಿಲ್ಲ ಯಾವ್ಯಾವ ಕೋರ್ಸು ಅನಂತ ಗೊತ್ತಿಲ್ಲ ಆದರೆ ಸಿಇಟಿ ಕರೆದುಬಿಟ್ಟಿದ್ದಾರೆ. ಅದಕ್ಕೇ ಹೇಳುವುದು ಉತ್ತರ ಕುಮಾರನ ಪೌರುಷ ಅಂತ. ರಾಜ್ಯ ಸರ್ಕಾರ ಇವತ್ತು ನಮ್ಮ ಮುಂದೆ ತೋರಿಸುತ್ತಾ ಇದೆ. ಒಂದು ನಿರ್ದಿಷ್ಟ ನೀತಿಯನ್ನು ಘೋಷಣೆ ಮಾಡುವ ಮುಂಚೆ ಪರೀಕ್ಷೆಯನ್ನು ಕರೆಯುವುದಿದೆಯಲ್ಲಾ ಒಂದು ರೀತಿ ದಾಖಲೇನೆ ಸರಿ ಆ ದಾಖಲೆಯನ್ನು ನಮ್ಮ ಘನ ಸರ್ಕಾರ ಮಾಡಿದೆ. ಇವತ್ತು ಕೃತಾರ್ಥವಾಗಿದೆ. ಇದರ ಜೊತೆ ನೀತಿ ಘೋಷಿಸಿಲ್ಲ. ಸರ್ಕಾರಕ್ಕೇ ಗೊತ್ತಿಲ್ಲ ಎಷ್ಟು ಸೀಟು ತಾವು ಕೊಡುತ್ತೇವೆ ಎಷ್ಟು ಸೀಟು ನಮ್ಮ ಕಂಟ್ರೋಲ್‌ನಲ್ಲಿದೆ ಅಂತ, ತನ್ನ ಕೈಲಿ ಸಾಧ್ಯವಾದ ಒಂದು ಕೆಲಸ ಮಾಡಿಬಿಟ್ಟಿದೆಃ ಅದ್ಯಾಕೆ ಸ್ವಾಮಿ ಅರ್ಜಿ ಬೆಲೆ350 ಇದ್ದುದನ್ನು 500 ರೂ ಮಾಡಿಬಿಟ್ಟಿರಿ? ಅದೊಂದೇನಾ ನಿಮ್ಮ ಕೈಲಿ ಸಾಧ್ಯವಾಗುತ್ತಿದ್ದು? ಇವತ್ತು 350 ರೂಗೆ ಇದ್ದ ಸಿಇಟಿ ಅರ್ಜಿಗೆ 500 ರೂ ಮಾಡಿದ್ದಾರೆ. ಯಾಕೆ ಸಿಇಟಿ ಬಡ ಸಂಸ್ಥೇನಾ? ಇವತ್ತು ಸಿಇಟಿ ತನ್ನದೇ ಆದ ಸ್ವಂತ ಕಟ್ಟಡ ಹೊಂದಿದೆ, ಸಿಇಟಿ ಹತ್ತಿರ ಎಷ್ಟು ದುಡ್ಡಿತ್ತು ಅಂದರೆ ನನಗೆ ಗೊತ್ತಿರುವ ಪ್ರಕಾರವೆಷ್ಟು ತಿಂಗಳ ಹಿಂದೆ ಮುಖ್ಯಮಂತ್ರಿಗಳ ನಿಧಿಗೆ ಸುಮಾರು ಒಂದು ಕೋಟಿ ರೂ ಕೊಟ್ಟರು ಅವರು ಅವರ ಹತ್ತಿರ ಅಷ್ಟು ದುಡ್ಡಿದೆ, ಕಟ್ಟಡ ಇದೆ, ಸೀಟು ಕೊಡುವುದಕ್ಕಾಗುವುದಿಲ್ಲ ಎಷ್ಟು ಸೀಟು ಕೊಡುತ್ತೇವೆ ಅಂತ ಗೊತ್ತಿಲ್ಲ ಆದರೆ ಅದು 500 ರೂ. ತಮ್ಮ ಕೈಲಿ ಸಾಧ್ಯವಾದ ಕೆಲಸ ತಾವು ಮಾಡಿಬ್ಬಿಟದ್ದೀರಿ. 350 ಇದ್ದುದ್ದನ್ನು 500 ಕ್ಕೆ ಹೆಚ್ಚಿಸಿದ್ದಾರೆ ಯಾವ ಪುರುಷಾರ್ಥಕ್ಕೆ? ಇದರ ಅರ್ಥವೇನು? ಅಥವಾ ಸರ್ಕಾರದ ವಿವೇಚನೇ ಇಷ್ಟಾ? ಈ ಹಿನ್ನೆಲೆಯಲ್ಲಿ ನಾವು ಇವತ್ತು ಆ ಸಿಇಟಿ ಪರೀಕ್ಷೆ ಬಗ್ಗೆ ಸುಪ್ರಿಂ ಕೋರ್ಟಿನ ತೀರ್ಪಿನ ನಂತರ ಚರ್ಚೆ ಮಾಡುತ್ತಿದ್ದೇವೆ. ಅಧ್ಯಕ್ಷರೇ, ನಾನು ಅಂದುಕೊಂಡೆ, ಇವತ್ತು ಸದನ ಪ್ರಾರಂಭವಾಗುತ್ತದೆ ಅಂತ ಗೊತ್ತಾದ ತಕ್ಷಣ ಸನ್ಮಾನ್ಯ ಸಚಿವರು rather than government on his own will lay some paper on the table of this House ಒಂದು ಪೇಪರನ್ನು ಇಟ್ಟು ಈ ರೀತಿ ಪರಿಸ್ಥಿತಿಯಾಗಿದೆ ನಾವು ಈ ರೀತಿ ಪ್ರಯತ್ನ ಪಟ್ಟಿದ್ದೇವೆ ಈ ರೀತಿ ಆಗಬಹುದು ಅಂತ ನನಗನ್ನಿಸಿದೆ ಅಂತ ಒಂದು minimum paper ನ್ನು ಈ ಸದನದ ಮುಂದೆ ಇಡುತ್ತೀರಿ ಅಂತ ಅಂದುಕೊಂಡಿದ್ದೆ. ನಾವು ರೂಲ್ 69 ಕೆಳಗೆ ಭಾಷಣ ಮಾಡುವುದಕ್ಕೆ ಮುಂಚೆ ಯಥಾಪ್ರಕಾರ ಸರ್ಕಾರದ ಧೋರಣೆ, ಪೇಪರ್ ಹೇಗಿದ್ದರೂ ಇದೆಯಲ್ಲಾ ಓದಿಕೊಳ್ಳಲಿ ಅಂತ. The minimum thing that the govt. could have done you have miserably failed to do; that shows the governments sensitiveness on this issue. ಸರ್ಕಾರ ಮತ್ತು

ಖಾಸಗಿ ಮ್ಯಾನೇಜ್‌ಮೆಂಟ್‌ಗಳ ನಡುವೆ ಏನು ಪ್ರಹಸನ ನಡೆಯುತ್ತಿದೆ- ಒಂದು ಸುತ್ತು ಎರಡು ಸುತ್ತು ಮೂರು ಸುತ್ತು - ನಗು ಬರುವುದು ಯಾವುದು ಸರ್ಕಾರ? ಯಾವುದು ಖಾಸಗಿ ಮ್ಯನೇಜ್‌ಮೆಂಟ್ ಅಂತ ಗೊತ್ತಾಗ್ತಾನೇ ಇಲ್ಲ. ಜೊತೆಗೆ ಸರ್ಕಾರ ತನ್ನ ಅಸಹಾಯಕತೆಯನ್ನೂ ಸಹ ಇವತ್ತು ಎಕ್ಸ್‌ಪ್ರೆಸ್ ಮಾಡಿದೆ.

ನನ್ನ ಹತ್ತಿರ ಒಂದು ಡಾಕ್ಟರ್ ಪರಮೇಶ್ವರ್‌ರವರ ಹೇಳಿಕೆ ಇದೆ. ನವಂಬರ್ 22 ನೇ ತಾರೀಖು, ಅಂದರೆ ಸುಪ್ರೀಂ ಕೋರ್ಟಿನ ತೀರ್ಪು ಬಂದು ಸುಮಾರು 22 ದಿವಸಕ್ಕೆ ಅವರು ಹೇಳುತ್ತಾರೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಬಗ್ಗೆ ಸಾರ್ವಜನಿಕ ಅಭಿಪ್ರಾಯ ರೂಪುಗೊಳ್ಳಬೇಕು. ತೀರ್ಪಿನಿಂದಾಗಿ ಮೆರಿಟ್‌ಗೆ ಸ್ಥಾನವೇ ಇಲ್ಲವಾಗಿದೆ ಎಂದು ಡಾ।। ಪರಮೇಶ್ವರ್ ವಿಷಾದಿಸಿದರು. you are one with us ಇದನ್ನು ಯಾವತ್ತು ಹೇಳಿದಿರಿ ನೀವು. ನವಂಬರ್ 22. ಇದಾದನಂತರ ಡಿಸೆಂಬರ್ 31ನೇ ತಾರೀಖು ವಿಧಾನಪರಿಷತ್ತಿನಲ್ಲಿ ಒಂದು ವೀರಾವೇಶದ ಮಾತು ಬಂತು. ಏನೆಂದರೆ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ರದ್ದು ಮಾಡುವುದಿಲ್ಲ, ಉನ್ನತ ಶಿಕ್ಷಣದಲ್ಲಿ ಮೆರಿಟ್ ಮತ್ತು ಸಾಮಾಜಿಕ ನ್ಯಾಯಕ್ಕೆ ಆದ್ಯತೆ ನೀಡಲು ಬದ್ಧ ಎಂದು ರಾಜ್ಯ ಸರ್ಕಾರ ವಿಧಾನಪರಿಷತ್ತಿನಲ್ಲಿ ಸ್ಪಷ್ಟಪಡಿಸಿದೆ. ಗುಡ್ . ಮೆರಿಟ್ ಮತ್ತು ಸಾಮಾಜಿಕ ನ್ಯಾಯ ನಮ್ಮ ಮೂಲ ಮಂತ್ರ. ಜನರಲ್ ಮೆರಿಟ್ ವಿದ್ಯಾರ್ಥಿಗಳನ್ನು ಯಾವುದೇ ಕಾರಣಕ್ಕೂ ಬೀದಿಗೆ ಹಾಕುವುದಿಲ್ಲ. ಎಕ್ಸ್‌ಲೆಂಟ್ ನಾವು ತೆಗೆದುಕೊಳ್ಳುವ ತೀರ್ಮಾನ ಯಾವುದೇ ಮುಲಾಜಿಗೆ ಒಳಗಾಗಿ ತೆಗೆದುಕೊಳ್ಳುವುದಿಲ್ಲ. ಇದನ್ನು ಅಂಡರ್‌ಲೈನ್ ಮಾಡಬೇಕು. ಚರ್ಚೆ ಮಾಡುತ್ತೇವೆ. ಚೌಕಾಶಿ ಮಾಡುವುದಿಲ್ಲ ಎಂದು ಡಾ।। ಪರಮೇಶ್ವರ್‌ರವರು ಸ್ಪಷ್ಟಪಡಿಸಿದರು. This was stated on on the floor of the Legislative Council on december 31st. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ತೀರ್ಪು ಬಂದು ನಾಲ್ಕೂವರೆ ತಿಂಗಳಾಗಿದೆ. ಸನ್ಮಾನ್ಯ ಸಚಿವರು ವಿಧಾನಪರಿಷತ್ತಿನಲ್ಲಿ ಆ ಮಾತು ಕೊಟ್ಟು, ಆ ವಾಗ್ದಾನವನ್ನು ಕೊಟ್ಟು ರಾಜ್ಯದ ಯುವಕರಿಗೆ, ಯುವ ಸಮೂಹಕ್ಕೆ ಸುಮಾರು ಎರಡೂವರೆ ತಿಂಗಳಾಗಿದೆ. ಎರಡೂವರೆ ತಿಂಗಳ ನಂತರ ಮೂರು ಸುತ್ತಿನ ಮಾತುಕತೆ ನಡೆಯುತ್ತಿದೆ. ನನಗೆ ಪೇಪರ್ ನೋಡಿದರೆ ಬರೀ ಚೌಕಾಶೀನೆ ಕಾಣುತ್ತಿರುವುದು, ಬರೀ ಮುಲಾಜೀ ಕಾಣುತ್ತಿರುವುದು. ನೀವು ಮುಲಾಜಿಗೆ ಒಳಗಾಗುವುದಕ್ಕೆ ಈ ಚರ್ಚೆ ಮಾಡುತ್ತಿದ್ದೀರಿ. ಚೌಕಾಶಿ ಮಾಡುತ್ತಿದ್ದೀರಿ. ಅವರು 20 ಪರ್‌ಸೆಂಟ್ ಎಂದರೆ ಬೇಡ 25, ಅವರು 25 ಬೇಡ ಎಂದರೆ 30, ಈ ರೀತಿಯ ಚೌಕಾಶಿಯ ವ್ಯಾಪಾರ ಇವತ್ತು ಸರ್ಕಾರ ಮತ್ತೆ ಖಾಸಗಿ ಮ್ಯಾನೇಜ್‌ಮೆಂಟ್‌ಗಳ ನಡುವೆ ಇವತ್ತು ರಾರಾಜಿಸುತ್ತಿದೆ. ಇಡೀ ನಾಡಿಗೆ ಇವತ್ತು ಗೊತ್ತಾಗುತ್ತಿದೆ. ಇವತ್ತು ಸುಪ್ರೀಂ ಕೋರ್ಟ್ ತೀರ್ಪು ಬಂದಿದೆ.

ಡಾ।। ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :- ತಾವು ಚರ್ಚೆ ಮಾಡುತ್ತಿರುವುದು ಮತ್ತು ಮಾತನಾಡುತ್ತಿರತಕ್ಕಂಥದ್ದು ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ದಯಮಾಡಿ ತಾವು ಆ ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್‌ನ್ನು ತೆಗೆದುಕೊಂಡರೆ ಬಹಳ ಒಳ್ಳೆಯದು. ಏಕೆಂದರೆ ನಮಗೆ ಸಹಾಯ ಮಾಡಿದಂತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಚರ್ಚೆ ಮಾಡಲೇಬೇಕು. ಸುಪ್ರೀಂ ಕೋರ್ಟಿನಲ್ಲಿ ಏನು

ತೀರ್ಮಾನವಾಯಿತು, ಕೊಶ್ಚನ್ ಆಫ್ ಇಂಟರ್‌ಪ್ರೆಟೇಷನ್ ಇದೆ ಅದರಲ್ಲಿ ತಮಗೆ ಅನುಕೂಲವಾಗುವ ಹಾಗೆ ಅದು ಇಂಟರ್‌ಪ್ರೆಟೇಷನ್ ನಡೆಯುತ್ತಿದೆ. ಅದರ ಬಗ್ಗೆ ನಾವು ಹೆಚ್ಚು ಬೆಳಕನ್ನು ಚೆಲ್ಲಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಏನಾಗಿದೆ ಎಂದು ಹೇಳುತ್ತಿದ್ದಾರೆ, ಅವರೇ ಈ ಬಗ್ಗೆ ಒಂದು ತಜ್ಞರ ಸಮಿತಿಯನ್ನು ನೇಮಿಸಿದ್ದರು ಅವರೊಂದು ವರದಿ ಕೊಡಬೇಕು. ಆ ವರದಿಯನ್ನಾಧರಿಸಿ ಮುಂದೆ ಅವರು ರೆವ್ಯೂ ಪಿಟಿಷನನ್ನು ಹಾಕಬೇಕು, ಮುಂದೇನು ಮಾಡಬೇಕು ಈ ಬಗ್ಗೆ ಎನ್ನುವುದರ ಬಗ್ಗೆ ಒಂದು ಸಮಿತಿಯನ್ನು ಸರ್ಕಾರ ನೇಮಕ ಮಾಡಿದ್ದಾರೆ. ಆ ಸಮಿತಿ ವರದಿಯನ್ನು ಏನು ಕೊಟ್ಟರು ಎಂಬುದನ್ನು ತಾವು ಸದನಕ್ಕೆ ತಿಳಿಸಬೇಕು. ಏನು ಕೊಟ್ಟಿದ್ದಾರೆ, ಮುಂದೆ ನಾವೇನು ಮಾಡಬೇಕು ಎಂದು ಹೇಳಿ ಸ್ಪಷ್ಟ ಚಿತ್ರವನ್ನು ಕೊಟ್ಟಿದ್ದಾರೆ. ತಾವು ಎಷ್ಟು ಜನರ ತಜ್ಞರ ಸಮಿತಿಯನ್ನು ನೇಮಕ ಮಾಡಿದ್ದೀರಿ? ಅವರೇನು ವರದಿಯನ್ನು ಸರ್ಕಾರಕ್ಕೆ ತಮಗೆ ಕೊಟ್ಟಿದ್ದಾರೆ ಎನ್ನುವುದರ ಬಗ್ಗೆಯೂ ಅದು ಈಚೆಗೆ ಬರಬೇಕು.

ಡಾ।। ಜಿ. ಪರಮೇಶ್ವರ್ :- ಮಾನ್ಯ ಅಧ್ಯಕ್ಷರೇ,

ಶ್ರೀ ಬಿ.ಎನ್. ಬಚ್ಚೇಗೌಡ :- ಸುಪ್ರೀಂ ಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ನೀವೇನು ಮಾಡಿದ್ದೀರಿ? ನೀವೇನು ಕ್ರಮವನ್ನು ತೆಗೆದುಕೊಂಡಿದ್ದೀರಿ, ತಜ್ಞರ ವರದಿಯನ್ನು ಏನು ಕೊಟ್ಟಿದ್ದಾರೆಂಬುದನ್ನು ಹೇಳಿ.

**Dr. G. Parameswara:-** It has already been made public.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಅಧ್ಯಕ್ಷರೇ, ಇವತ್ತು ಏನಾಗಿದೆ ಖಂಡಿತವಾಗಿಯೂ ಅಲ್ಲಿಂದಲೇ ಪ್ರಾರಂಭ ಮಾಡುತ್ತೇನೆ. ಇವತ್ತು ಏನಾಗಿದೆ ಅಕ್ಟೋಬರ್ 31 ನೇ ತಾರೀಖಿನ ತೀರ್ಪು ಅದು. It should have solved the problems. Instead of solving the problems ಬೇರೆ ಬೇರೆ ಜನರಿಗೆ ಬೇರೆ ಬೇರೆ ಅನಿಸುವ ರೀತಿಯಲ್ಲಿ ಹೊಸ ಪ್ರಾಬ್ಲಂಸ್‌ನ್ನು ಸೃಷ್ಟಿ ಮಾಡಿದೆ. ಬಹಳ ದುರದೃಷ್ಟ. ಇವತ್ತು ನನ್ನ ಹತ್ತಿರ ಒಂದು ನೋಟನ್ನು ರೆಡಿ ಮಾಡಿಕೊಂಡಿದ್ದೇನೆ. ಈ ಜಡ್ಜ್‌ಮೆಂಟ್‌ನಿಂದ ಏನಾಗಿದೆ, "this judgement thas created a fear among the parents, among the students and the general public in relation to admission of students to the professional courses and payment of fee." ಎರಡೇ. ಹೇಗೆ ಅಡ್ಮಿಷನ್ ಆಗುತ್ತದೆ, ಹೇಗೆ ಫೀಯನ್ನು ಕೊಡುತ್ತದೆ, ಈ ಎರಡರಲ್ಲಿ ಬಹಳ ಜನ ಗಾಬರಿಯಾಗಿದ್ದಾರೆ. Despite three rounds of talks between government and unaided managment institutions no concrete stand has been spelt out till now. The main questions before the Supreme Court ಐದು ಇತ್ತು. ಮೊದಲನೆಯದು, ಅವರ ಮುಂದೆ ಹೋಗಿದ್ದೇ ವಿಚಾರ ಬೇರೆ. ಅವರು ತೀರ್ಪು ಕೊಟ್ಟಿರುವುದೇ ಬೇರೆ. what is the meaning of minority? ಅವರ ಮುಂದೆ ಇದ್ದದ್ದು. What is meant by expression "Religion"? ಅದು ಅವರ ಮುಂದೆ ಇದ್ದದ್ದು. What are the criteria to treat an educational institution as a "minority" institution? ಅದು ಅವರ ಮುಂದೆ ಇದ್ದದ್ದು. To what extent professional

education as matter to be treated coming under minority ritts? ಈ ಕ್ವೊಶ್ಚನ್ಸ್ ಬಹಳ ಮುಂಚೆಯೇ ಅವರ ಹತ್ತಿರ ಹೋಗಿತ್ತು. ಆದರೆ ನಮ್ಮ ದುರಾದೃಷ್ಟ ನಮ್ಮ ರಾಜ್ಯದ ವಿದ್ಯಾರ್ಥಿಗಳ ದುರಾದೃಷ್ಟ ಉತ್ತರ ಕೊಡುವಾಗ ಏನು ಮಾಡಿದರು, Apex court has taken the following issues which are alien to the dispute. ಹೋಗಿದ್ದು ಇಷ್ಯೂಸ್ ಅದು. ಅವರು ಯಾವ ಇಷ್ಯೂಸನ್ನು ತೆಗೆದುಕೊಂಡರು ಎಂದರೆ whether the admission of students to minority institutions can be regulated by the State? ಮೊದಲನೇ ಇಷ್ಯೂಸನ್ನು ಅವರು ತೆಗೆದುಕೊಂಡರು. whether the minorities' rights to establish and to administer the educational institutions includes the method of admission and selection of students? ಮೂರನೆಯದು ಇದು ಬಹಳ ಇಂಪಾರ್ಟೆಂಟ್. whether the unaided educational institution has a right to fix the fees? the apex court has answered the above points in favour of unaided institutions. ಬೇರೆ ಕ್ವೊಶ್ಚನ್ಸ್ ಎಲ್ಲಾ ನಾವು ತೀರ್ಮಾನ ಮಾಡುವುದಿಲ್ಲ ಎನ್ನುವುದನ್ನು ನಾನು ಆಮೇಲೆ ಓದುತ್ತೇನೆ. ಇಷ್ಟೆಲ್ಲಾ ಆದರೂ ಕೂಡ ನಮ್ಮ ರಾಜ್ಯ ಸರ್ಕಾರಕ್ಕೆ ಸಂಪೂರ್ಣ ಬಾಗಿಲೇನೂ ಮುಚ್ಚಿ ಬಿಟ್ಟಿಲ್ಲ. ಸುಪ್ರೀಂ ಕೋರ್ಟ್ ಆದ ನಂತರ. ಸುಪ್ರೀಂ ಕೋರ್ಟಿನ ತೀರ್ಪಿನಲ್ಲಿ ಬಹಳಷ್ಟು ಸ್ಪೆಷಿಫಿಕ್ ಆಗಿ ಹೇಳಿರುವುದು. The Supreme Court has not aolished, has not quashed abolition of capitation Fee Act. ನಮ್ಮ ರಾಜ್ಯದ್ದೇ ಒಂದು ಇದೆ. ಕ್ಯಾಪಿಟೇಷನ್ ಫೀ ಆ್ಯಕ್ಟ್. ಅದನ್ನು ಕ್ವಾಷ್ ಮಾಡಿಲ್ಲ. ಅದು ಇನ್ನೂ ಕೂಡ ಅಸ್ತಿತ್ವದಲ್ಲಿದೆ And also the rules framed for selection of students on the basis of merit by CET .ಸಿಇಟಿ ರೂಲ್ಸ್‌ನ್ನು ಕೂಡ ಕ್ವಾಷ್ ಮಾಡಿಲ್ಲ. ಆ ಎರಡೂ ಕೂಡ ಇನ್ನೂ ಅಸ್ತಿತ್ವದಲ್ಲಿದೆ. As long as the government and the private unaided institutions do not agree on the question of selection of students and issuance of government notification, the earlier system shall be continued. ನೀವೇನಾದರೂ ಹೊಂದಾಣಿಕೆ ಆಗದಿದ್ದರೆ ಹೊಂದಾಣಿಕೆಯಾಗಿಬಿಟ್ಟು ಒಂದು ಹೊಸ ಶಾಸನವೋ ಒಂದು ಹೊಸ ತೀರ್ಪು ಬರದಿದ್ದರೆ ಆ ಅಬಾಲಿಷನ್ ಆಫ್ ಕ್ಯಾಪಿಟೇಷನ್ ಫೀಸೂ ಕಂಟಿನ್ಯೂ ಆಗುತ್ತದೆ. ಸಿಇಟಿ ರೂಲ್ಸ್ ಕೂಡ ಕಂಟಿನ್ಯೂ ಆಗುತ್ತದೆ. ಅದನ್ನು ಸರ್ಕಾರ ಗಮನಿಸಿಲ್ಲವೇ? Next, even on the question of fees, the apex court has not given an absolute right to the unided institutions to determine the arbitrarily and irrationally.

ಡಾ|| ಜಿ. ಪರಮೇಶ್ವರ್:- ಅದು ಜಡ್ಜ್‌ಮೆಂಟ್ ಕಾಪಿಯಲ್ಲಿ ಎಷ್ಟನೇ ಪ್ಯಾರಾದಲ್ಲಿದೆ?

ಶ್ರೀ ಎಸ್. ಸುರೇಶ್‌ಕುಮಾರ್:- ಅದಕ್ಕೇ ಬರುತ್ತೇನೆ. ಪ್ಯಾರಾ ನಂಬರ್ 58.

"For admission into any professional institution merit must play an important role."

This should help us, help the State.

ಅದೇ ಪ್ಯಾರಾದಲ್ಲಿ ಹೇಳುತ್ತಾರೆ, "It is necessary that meritorious candidates are not unfarrly treated or put at a disadvantage by preferences shown to less meritorious but more influential applicants.

" ಅದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. "Excellence in professional education would require that greater emphasis be laid on the merit of a student seeking admission." This is para No 58.

ಪ್ಯಾರಾ 59 ರಲ್ಲಿ ಹೇಳುತ್ತಾರೆ. "Merit is usually determined, for admission to professional and higher education colleges, by either the marks that the student obtains at the qualifying examination or school leaving certificate stage followed by the interview, or by a common entrance test conducted by the institution, or in the case of professional colleges, by government agencies."

**Para No. 68:**

"It must be borne in mind that unaided professional institutions are entitled to automomy in their administration while, at the same time, they do not forego or discard the principle of merit. It would, therefore, be permissible for the university or the government, at the time of granting recognition, to require a private unaided institution to provide for merit based selection while, at the same time, giving the managment sufficient discretion in admitting students. This can be done through various methods. For instance, a certain percentage of the seats can be reserved for admission by the Management out of those students who have passed the common entrance test held by itself or by the State/University and have applied to then college concerned for admission, while the rest of the seats may be filled up on the basis of counselling by the State agency. This will incidentally take care of poorer and backward sections of the society. The prescription of percentage for this purpose has to be done by the government according to the local needs and defferent percentages.."

**Para 69:**

" A rational fee structure should be adopted by the Managment."

ಡಾ।। ಜಿ. ಪರಮೇಶ್ವರ್:- ಪ್ಯಾರಾ 68 ಎಲ್ಲಿ ತಾವು ಪ್ರಾರಂಭದಿಂದಲೂ ಓದಿದರೆ ಒಳ್ಳೆಯದು.

ಶ್ರೀ ಎಸ್. ಸುರೇಶ್‌ಕುಮಾರ್:- ನನಗೆ ಏನು ಬೇಕೋ ಅದನ್ನು ಓದುತ್ತೇನೆ. ತಾವು ಉತ್ತರ ಕೊಡುವಾಗ ಹೇಳಿ. ನಾನು ರಾಜ್ಯ ಸರ್ಕಾರಕ್ಕೆ ಶಕ್ತಿ ಕೊಡುವ ಅಂಶಗಳು ಇದೆಯೆಂದು ಹೇಳುತ್ತಿದ್ದೇನೆ.

ಡಾ|| ಜಿ. ಪರಮೇಶ್ವರ್:- ಈ ಜಡ್ಜ್‌ಮೆಂಟ್‌ನಲ್ಲಿ ಬಹಳಷ್ಟು ಕಾಂಟ್ರಡಿಕನ್ಸ್ ಇದೆ. ತಾವು ಪ್ಯಾರಾ 68 ನ್ನು ಓದುವಾಗ ತಮಗೆ ಯಾವುದು ಬೇಕೋ ಅದನ್ನು ಓದುತ್ತೇನೆಂದು ಹೇಳಿದ್ದಿರಿ. ಅಲ್ಲಿ ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ಏನು ಕೊಟ್ಟಿದ್ದಾರೆ ಎಂಬ ಬಗ್ಗೆ ಮೊದಲನೆಯ ಭಾಗವನ್ನು ಓದಿ.

" It would be unfair to apply the same rules and regulations regulating admission to unaided professional institutions. It must be borne in mind that unaided professional institutions are entitled to autonomy in their administration while at the same time they don't forego or discard the principles of merit. It would, therefore, be permissible for the University or the Government at the time of granting reconition to regulate a private unaided institution to provide for merit based selection while at the same time giveing the managment sufficient discretion in admitting students."

The next sentence itself is contradictory, I know. If you read both it will sort out...

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಮಾನ್ಯ ಅಧ್ಯಕ್ಷರೆ, ಇದರಲ್ಲಿ ಕಾಂಟ್ರಡಕ್ಷನ್ ಇದೆಯೆಂದು ಮಂತ್ರಿಗಳೇ ಒಪ್ಪಿಕೊಂಡರು. ಜಡ್ಜ್‌ಮೆಂಟ್‌ನಲ್ಲಿ ಅಡ್ಡ ಗೋಡೆಯ ಮೇಲೆ ದೀಪ ಇಟ್ಟಂತೆ ಮಾಡಿದ್ದಾರೆಂದು ಹೇಳಿದರು. ಆದರೆ ಸರ್ಕಾರ ಸುಪ್ರೀಮ್ ಕೋರ್ಟ್‌ನ ಮುಂದೆ ಪುನಃ ಹೋಗಲಿಲ್ಲ. ಕಾಂಟ್ರಡಕ್ಷನ್ ಇದೆಯೆಂದು ಗೊತ್ತಿದ್ದರೂ ಹೋಗಲಿಲ್ಲ. ನಾಳೆ ಇವರು ಸಿ.ಇ.ಟಿ. ಮಾಡಿ ಆಯ್ಕೆ ಮಾಡುತ್ತಾರೆ ಆದರೆ ಕಾಲೇಜಿನವರು ಅಡ್ಮಿಷನ್ಸ್ ಮಾಡಿಕೊಳ್ಳುವುದಿಲ್ಲ, ಆಗ ಇವರು ಏನು ಮಾಡುತ್ತಾರೆ? ಇವರಿಗೆ ಎಲ್ಲಿದೆ ಅವಕಾಶ?

ಶ್ರೀ ಬಿ.ಎನ್. ಬಚ್ಚೇಗೌಡ:- ಈ ಪ್ರಶ್ನೆಯನ್ನು ಮಾನ್ಯ ಸಚಿವರೇ ಹೇಳಿದ್ದಾರೆ. ಬಾಗಲಕೋಟೆಯಲ್ಲಿ,, 31ನೇ ತಾರೀಖು ಸುಪ್ರಿಮ್ ಕೋರ್ಟ್‌ನಲ್ಲಿ ತೀರ್ಮಾನವಾದ ಮೇಲೆ ವಿದ್ಯಾರ್ಥಿಗಳನ್ನು ಅಡ್ಮಿಷನ್ ಮಾಡಿಕೊಳ್ಳಲಿಲ್ಲ. ಅದರ ಬಗ್ಗೆ ವಿದ್ಯಾರ್ಥಿಗಳು ಕೋರ್ಟ್‌ಗೆ ಹೋಗಿದ್ದಾರೆಂದು ಮಾನ್ಯ ಸಚಿವರೇ ತಿಳಿಸಿದ್ದಾರೆ. ಬಾಗಲಕೋಟೆ ಇಶ್ಯೂನಲ್ಲಿ ಅಂತಿಮ ತೀರ್ಪು ಬರಬೇಕೆಂತಲೂ ಹೇಳಿದ್ದಾರೆ. ಆ ವಿದ್ಯಾರ್ಥಿಗಳಿಗೆ ಲಾಟ್ ಮಾಡಿರುವ ಸೀಟ್‌ಗೆ ಅವರು ಅಡ್ಮಿಷನ್ಸ್ ಕೊಡದಿದ್ದರೆ ಆ ವಿದ್ಯಾರ್ಥಿಗಳ ಗತಿ ಏನು? ಅದರ ಸ್ಥಿತಿ ತ್ರಿಶಂಕುವಾಗಿದೆ. ಆ ಹುಡುಗರ ಒಂದು ವರ್ಷ ಹೋಯಿತು.

ಡಾ|| ಜಿ.ಎಸ್. ಪರಮೇಶ್ವರ್:- ಬಾಗಲಕೋಟೆ ವಿಚಾರದಲ್ಲಿ ಜಡ್ಜ್‌ಮೆಂಟ್ ಮ್ಯಾನೇಜ್‌ಮೆಂಟ್‌ನ ಪರವಾಗಿದೆ. ನಾವು ಮತ್ತೆ ಅಪೀಲ್ ಹೋಗಿದ್ದೇವೆ. ಆಗ ಇದೆಲ್ಲಾ

ಇಂಟರೀಮ್ ಆರ್ಡರ್ಸ್ It is only an interim order. pending fixation of this fees, students can be admitted, ಎಂದು ಕೊಟ್ಟಿದ್ದಾರೆ. ಏನು ಮಾಡಲು ಆಗುತ್ತದೆ? So there are contradictions.ಅದನ್ನು ತೆಗೆದುಕೊಂಡೇ ತಾವು ಹೇಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ:- ಅದನ್ನೇ at some point of time you have expressed it.

ಡಾ|| ಜಿ. ಪರಮೇಶ್ವರ್:- ಕಾಂಟ್ರಡಕ್ಷನ್ಸ್ ಏನಿದೆ ಎಂಬುದನ್ನು ನಾನು ಪಾಯಿಂಟ್‌ಔಟ್ ಮಾಡುತ್ತಿದ್ದೇನೆ. ಅದಕ್ಕೋಸ್ಕರ ತಾವು ಅದನ್ನೂ ಹೇಳಬೇಕಲ್ಲವೆ?

ಶ್ರೀ ಎಸ್. ಸುರೇಶ್‌ಕುಮಾರ್:- ಸುಪ್ರೀಮ್ ಕೋರ್ಟ್‌ನ ತೀರ್ಪು ಐದು ಜನ ಕುರುಡರು ಆನೆಯನ್ನು ಮುಟ್ಟಿದಂತಿದೆ. ಆ ಪ್ರೈವೇಟ್ ಮನೇಜ್‌ಮೆಂಟ್‌ನವರಿಗೆ ಏನು ಬೇಕೋ ಅದು ಕಾಣಿಸುತ್ತಿದೆ. ಹೊಟ್ಟೆ ಮುಟ್ಟಿದರೆ ಅವರಿಗೆ ಗೋಡೆ ಕಾಣಿಸುತ್ತದೆ, ಬಾಲ ಮುಟ್ಟಿದರೆ ಹಾವು ಕಾಣಿಸಿದಂತಾಗುತ್ತದೆ, ಕಾಲನ್ನು ಮುಟ್ಟಿದರೆ ಕಂಬ ಕಂಡಂತೆ ಆಗುತ್ತದೆ. ಸುಪ್ರೀಮ್‌ಕೋರ್ಟ್‌ನ ಜಡ್ಜ್‌ಮೆಂಟ್ ಸಹ ಅದೇ ರೀತಿ ಇದೆ. ಮಾನ್ಯ ಜಯಪ್ರಕಾಶ್ ಹೆಗಡೆಯವರು ಹೇಳಿದಂತೆ, ನಿಮಗೆ ಈ ರೀತಿ ಕಾಂಟ್ರಡಕ್ಷನ್ಸ್ ಇದೆಯೆಂದು ಗೊತ್ತಿದ್ದರೂ ಕೂಡ You have lost a golden opportunity. I will come to that later. ಹೀಗೆ ತಾವೇ ಹೇಳಿದಂತೆ ಕಾಂಟ್ರಡಕ್ಷನ್ಸ್ ಇದೆ ಸರ್ಕಾರಕ್ಕೆ ಇದರಲ್ಲಿ ಶಕ್ತಿ ಬರುವಂಥ ಅಂಶಗಳು ಇದೆಯೆಂದು ಸರ್ಕಾರಕ್ಕೆ ಗೊತ್ತಾಗಿದೆಯೆಂದು ಈಗ ನಮಗೂ ಗೊತ್ತಾಗುತ್ತಿದೆ. ಡಾ|| ಪರಮೇಶ್ವರ್‌ರವರು ಹಿಂದೆ ಹೇಳಿದ್ದ ಮಾತೊಂದು ನನಗೆ ನೆನಪಿದೆ. ಅದೇನೆಂದರೆ, ವೃತ್ತಿ ಶಿಕ್ಷಣ ಕಾಲೇಜುಗಳ ಸ್ಥಾಪನೆಗೆ "open sky" policy ಅನುಸರಿಸಲಾಗುವುದೆಂದು ಹೇಳಿದ್ದೀರಿ. ಅಂದರೆ, ಯಾರ್‍ಯಾರ ಹತ್ತಿರ ಮೂಲಭೂತ ಸೌಲಭ್ಯಗಳು ಇದೆಯೋ ಅವರು ಬಂದರೆ ನಾವು ಅನುಮತಿ ಕೊಡುತ್ತೇವೆ ಎಂದು. ನನಗೆ ಬಹಳ ಆಶ್ಚರ್ಯವಾಗತಕ್ಕದ್ದೇನೆಂದರೆ, ರಾಜಕಾರಣಿಗಳಿಂದ ಪ್ರಾರಂಭವಾಗತಕ್ಕ ಕಾಲೇಜಿಗೆ ಮೂಲಭೂತ ಸೌಲಭ್ಯಗಳು ಯಾವ ರೀತಿಯಲ್ಲಿ ಇರುತ್ತದೆ? ಬೇರೆಯವರು ಏಕೆ ಬರುವುದಿಲ್ಲ? May be engineering; may be medical. ಇದು ನನ್ನ ಮನಸ್ಸಿನಲ್ಲಿ ಕೊರೆಯುತ್ತಿರುವ ಪ್ರಶ್ನೆ. ಆ ಪ್ರಶ್ನೆ ಏಕೆ ಕೊರೆಯುತ್ತಿದೆ ಎಂಬ ಬಗ್ಗೆ ಮುಂದೆ ಹೇಳುತ್ತೇನೆ. 1984 ರಲ್ಲಿ ಎಜ್ಯುಕೇಷನ್ ಆ್ಯಕ್ಟ್ ಎಂದು ಮಾಡಿದ್ದಾರೆ. ಆಗ ಬಹಳ ಅನುಕೂಲವಾಗಿರುವ ಒಂದು ಅಂಶವನ್ನು ಮಾಡಿದರು. ಅದೇನೆಂದರೆ Only a Trust or Society can start an educational institution and not any individual. ಇದೊಂದನ್ನು ಮಾಡಿದ್ದಾರೆ. ಇದರಿಂದ ಬಹಳಷ್ಟು ಜನರಿಗೆ ಅನುಕೂಲವಾಗಿದೆ. ನಮ್ಮದು ಎಂದು ಹೇಳಿಕೊಳ್ಳಲು ಆಗುವುದಿಲ್ಲ, ನಾವು ಯಾವುದೋ ಒಂದು ಸೊಸೈಟಿಯನ್ನು ಮಾಡಿ ಬಿಡುತ್ತೇವೆ. ಅಥವಾ ನಾವು ಯಾವುದೋ ಒಂದು ಟ್ರಸ್ಟ್ ಮಾಡಿಬಿಡುತ್ತೇವೆ. ನಮ್ಮ ಮೆಡಿಕಲ್, ಇಂಜನಿಯರಿಂಗ್ ಕಾಲೇಜನ್ನು ನಡೆಸಿಕೊಂಡು ಹೋಗುತ್ತೇವೆ. ಹಾಗೆ ನಡೆಸುತ್ತಾ ಹೋಗುವುದರಿಂದ ಇವತ್ತು ಈ ತೀರ್ಪು ಬಹಳಷ್ಟು ಜನ ಅಧಿಕಾರದಲ್ಲಿರುವವರಿಗೆ, ಯಾರು ರಾಜ್ಯಕ್ಕೆ ಸಹಾಯ ಮಾಡಬೇಕು ಅವರಿಗೆ ಬಹಳ ಅನುಕೂಲವಾಗಿರುವ ಜಡ್ಜ್‌ಮೆಂಟ್ ಎಂದು ಅನ್ನಿಸಿಬಿಟ್ಟಿದೆ. ಇದನ್ನು ಬಿಟ್ಟರೆ ನಮಗೆ ಅವಕಾಶವಿಲ್ಲ. ನಮಗೆ ಗೋರಿಕೊಳ್ಳುವುದೇ ಜಾಸ್ತಿಯಾಗಿತ್ತು, ಇವತ್ತು It is a manna from Supreme Court ಎಂದು ಅನ್ನಿಸಿಬಿಟ್ಟಿದೆ. ಈ ಸಂದರ್ಭದಲ್ಲಿ ಒಂದು

ಉದಾಹರಣೆಯನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ನಮ್ಮ ನೆರೆ ರಾಜ್ಯವೊಂದರಲ್ಲಿ ಹೈಯರ್ ಎಜ್ಯುಕೇಷನ್ ಮಂತ್ರಿಗಳು ಇದ್ದರು. ಆ ಸಚಿವರು ಒಂದು ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭ ಮಾಡಿದರು. ಆ ಕಾಲೇಜನ್ನು ಕನ್‌ವರ್ಟ್ ಆಗದಿರುವ ರೆವಿನ್ಯೂ ಲ್ಯಾಂಡ್‌ನಲ್ಲಿ ಪ್ರಾರಂಭ ಮಾಡಿದರು. ಆ ಯೂನಿವರ್ಸಿಟಿ ಇದನ್ನು ಮನಗಂಡು ಒಂದು ನೊಟೀಸನ್ನು ಕೊಟ್ಟಿತು. ಬಹಳ ಮಜಾ ಎಂದರೆ, ಆ ಯೂನಿವರ್ಸಿಟಿಯ ಪ್ರೋ ಚಾನ್ಸಿಲರ್ ಹೈಯರ್ ಎಜ್ಯುಕೇಷನ್ ಮಿನಿಸ್ಟರ್, ಆ ಯೂನಿವರ್ಸಿಟಿ ಹೈಯರ್ ಎಜ್ಯುಕೇಷನ್ ಮಿನಿಸ್ಟರ್‌ರವರ ಇಂಜಿನಿಯರಿಂಗ್ ಕಾಲೇಜಿಗೆ ಒಂದು ನೋಟೀಸ್ ಕೊಟ್ಟಿತು. ಪಾಪ ಅಲ್ಲಿನ ರೆವಿನ್ಯೂ ಮಿನಿಸ್ಟರ್‌ರವರನ್ನು ಹಿಡಿದು ಭಾಂದವ್ಯವಿರುತ್ತದಲ್ಲಾ, ರೆಟ್ರಾಸ್‌ಪೆಕ್ಟೀವ್ ಎಫ್‌ಕ್ಟ್‌ನಿಂದ ಕನ್‌ವರ್ಷನ್ ಮಾಡಿಸಿಬಿಟ್ಟರು. ಅದೂ ಕೂಡ ಸಮಾಧಾನವಾಗದೆಯೇ ಆ ಯೂನಿವರ್ಸಿಟಿಯವರು ಇನ್ನೊಂದು ಷೋಕಾಸ್ ನೊಟೀಸ್ ಕೊಟ್ಟರು. ಇದು ಆಗದೇ ಇರುವ ಅಂಶ, ಇದರ ಬಗ್ಗೆ ಕಾರಣಗಳನ್ನು ಕೊಡಿ ಎಂದು ಹೇಳಿದರು. ಈ ಸನ್ನಿವೇಶದಲ್ಲಿ ಭಾರತದ ರಾಷ್ಟ್ರಪತಿಗಳು ಆ ಯೂನಿವರ್ಸಿಟಿಗೆ ಒಂದು ಕಾರ್ಯಕ್ರಮದ ಸಲುವಾಗಿ ಬರಬೇಕಾಯಿತು. ಬಹಳ ಸಂದಿಗ್ದ ಪರಿಸ್ಥಿತಿ, ಭಾರತದ ರಾಷ್ಟ್ರಪತಿಗಳು ಬಂದು ಆ ಯೂನಿವರ್ಸಿಟಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಅವರ ಪಕ್ಕದಲ್ಲಿ ಕುಳಿತುಕೊಳ್ಳಬೇಕಾಗಿದ್ದವರು ಪ್ರೊ ಚಾನ್ಸಿಲರ್ The pro-Chancellor of this University who is none other than the recipient of show-cause notice from the university of which he is the Pro-Chancellor' ಬಹಳ ವಿಚಿತ್ರ ಸ್ಥಿತಿ ಆ ಪರಿಸ್ಥಿತಿ ಬಂದಾಗ ಅಲ್ಲಿನ ಮುಖ್ಯಮಂತ್ರಿ ಇದೇಕೋ ಬಹಳ ಎಂಬರಾಸಿಂಗ್ ಸಿಚ್ಯುಯೇಷನ್ ಬರುತ್ತದೆಂದು ಆ ಹೈಯರ್ ಎಜ್ಯುಕೇಷನ್ ಮಂತ್ರಿಯನ್ನೂ ಹಾಗೂ ಆ ಕಂದಾಯ ಸಚಿವರನ್ನೂ ತೆಗೆದು ಹಾಕಿದರು. ಈ ಒಂದು ಉದಾಹರಣೆ ನಮ್ಮ ನೆರೆ ರಾಜ್ಯದಲ್ಲೇ ನಡೆದಿದೆ ನನಗೆ ಡಾ|| ಪರಮೇಶ್ವರ್‌ರವರ ಬಗ್ಗೆ ನನ್ನದೇ ಆದ ರೀತಿಯಲ್ಲಿ ಗೌರವವಿದೆ.

4.50 ಪಿ.ಎಂ.

Infact ವಿಶ್ವವಿದ್ಯಾನಿಲಯ ಕಾಯಿದೆ ಬಗ್ಗೆ ತಾವು ಉತ್ತರ ಕೊಟ್ಟಾಗ I was the first among the MLAs to complement them, ಬಹಳ ಚೆನ್ನಾಗಿ ಉತ್ತರ ಕೊಟ್ಟರು ಎಂದು ಹೇಳಿದೆ. ನಾನಂದುಕೊಂಡೆಃ you will be sensitive to this issue ಎಂದು ತಿಳಿದುಕೊಂಡೆ. ಆದರೆ ದುರದೃಷ್ಟವಶಾತ್, ನನ್ನ ಅನಿಸಿಕೆ ಸತ್ಯವಾಗಲಿಲ್ಲ. ಎರಡು ವರ್ಷಗಳ ಹಿಂದೆ ತುಮಕೂರಿನ ಸಿದ್ದಾರ್ಥ ಡೆಂಟಲ್ ಕಾಲೇಜ್‌ನಲ್ಲಿ ಇನ್‌ಫ್ರಾಸ್ಟ್ರಕ್ಚರ್ ಸರಿಯಿಲ್ಲವೆಂದು ಸರ್ಕಾರ ಅಡ್ಮಿಷನ್ ಅನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿತು. ಫಸ್ಟ್ ರೌಂಡ್ ರದ್ದುಗೊಳಿಸಿತಲ್ಲದೆ, ಸೆಕೆಂಡ್ ರೌಂಡ್ ಸಹ ರದ್ದುಗೊಳಿಸಿತು. ಅನಂತರ, ಅವರಿಗೆ ಕೊಟ್ಟರು. ಇವೊತ್ತು ಇನ್‌ಫ್ರಾಸ್ಟ್ರಕ್ಚರ್ ಸರಿಯಿಲ್ಲವೆಂಬ ಒಂದು ಪರಿಸ್ಥಿತಿ ಆ ಕಾಲೇಜ್‌ನಲ್ಲಿ ಬಂತು. ಅಂತಹ ಒಂದು ಕಾಲೇಜಿನ ಸಂಬಂಧಿಕರು ಬೇರೆ ಕಾಲೇಜ್‌ನಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇದೆಯೋ ಇಲ್ಲವೋ ಎಂದು ನೋಡುವುದು. open sky policy ಘೋಷಿಸುವುದು ಯಾವ ರೀತಿ ತಾನೇ ಜಸ್ಟಿಫೈ ಆಗುತ್ತದೆ? How it is justified? ಎನ್ನುವುದು ಪ್ರಶ್ನೆ.

**ಡಾ|| ಜಿ. ಪರಮೇಶ್ವರ್:-** ಎರಡು ವರ್ಷಗಳ ಹಿಂದೆ ಸಿದ್ದಾರ್ಥ ಡೆಂಟಲ್ ರೆಕಗ್ನಿಷನ್ ತೆಗೆದದ್ದು ಅಲ್ಲಿನ ಇನ್‌ಫ್ರಾಸ್ಟ್ರಕ್ಚರ್ ಸರಿಯಿಲ್ಲವೆಂದಲ್ಲ. 1997-98 ರಲ್ಲಿ ನಾನು

ಮೆಡಿಕಲ್ ಎಜುಕೇಷನ್ ಮಿನಿಸ್ಟರ್ ಆಗಿರಲಿಲ್ಲ. ರಾಜ್ಯಕ್ಕೆ ತಪ್ಪು ಸುದ್ದಿ ಹೋಗಬಾರದು. I was not a Medical education Minister at that point of time. I was not a Pro-chancellor of that University. ಸಿದ್ಧಾರ್ಥ ಡೆಂಟಲ್ ಕಾಲೇಜ್‌ನಲ್ಲಿ ಯಾವುದೂ ಕೂಡ ಅನ್‌ಆಥರೈಸ್ಡ್ ಆಗಿ ಕನ್‌ಸ್ಟ್ರಕ್ಷನ್ ಕಟ್ಟಿ alienation ಮಾಡತಕ್ಕಂಥ ಸನ್ನಿವೇಶ ಕೂಡ ಇರಲಿಲ್ಲ. ಆದುದರಿಂದ, ರಾಜ್ಯಕ್ಕೆ ತಪ್ಪು ಕಲ್ಪನೆ ಹೋಗಬಾರದು.

ಶ್ರೀ ಎಸ್.ಸುರೇಶ್‌ಕುಮಾರ್:- ನಾನು ವಿಷಯಕ್ಕೆ ಬರುವುದಕ್ಕಿಂತ ಮುಂಚೆಯೇ you jumped into conclusion.

ಡಾ॥ ಜಿ. ಪರಮೇಶ್ವರ್:- ಸೆನ್ಸಿಟಿವ್ ಆಗಿ ಇರಬಾರದೆಂದು ನೀವು ಈಗ ಹೇಳಿದಿರಲ್ಲಾ ಅದಕ್ಕೋಸ್ಕರವೇ ನಾನು ಹೇಳಿದ್ದು.

ಶ್ರೀ ಎಸ್. ಸುರೇಶ್‌ಕುಮಾರ್:- ಈಗ ಏನಾಗಿದೆಯೆಂದರೆ, ಯಾವುದಕ್ಕೆ ಓವರ್ ಸೆನ್ಸಿಟಿವ್ ಆಗಬೇಕೋ ಅದಕ್ಕೆ ಇನ್‌ಸೆನ್ಸಿಟಿವ್ ಆಗಿಬಿಡುತ್ತೇವೆ. ಯಾವುದಕ್ಕೆ ಇನ್‌ಸೆನ್ಸಿಟಿವ್ ಆಗಬೇಕೋ ಅದಕ್ಕೆ ಓವರ್ ಸೆನ್ಸಿಟಿವ್ ಆಗುತ್ತೇವೆ. ಮುಂದಿನ ವಿಚಾರಕ್ಕೆ ನಾನು ಇನ್ನೂ ಬಂದಿಲ್ಲ.

ಡಾ॥ ಜಿ. ಪರಮೇಶ್ವರ್:- ದಯವಿಟ್ಟು ರಾಜ್ಯದ ಜನರಿಗೆ ತಪ್ಪು ಮಾಹಿತಿ ಹೋಗಬಾರದು.

**Sri S. Suresh Kumar:-** Ok, The least I accept that from Dr. Parameshwar was. You should have sought for a different port folio. ಈ ರೀತಿಯಾಗಿ ಒಂದು ಸಮಸ್ಯೆ ಬಂದಾಗ ಬೇರೆ ಮ್ಯಾನೇಜ್‌ಮೆಂಟ್ ಜೊತೆ ಮಾತನಾಡುವಾಗ, ಚರ್ಚೆ ಮಾಡುವಾಗ 'ಇಲ್ಲ, ಇದು ನನಗೆ ಬೇಡ, ಬೇರೆ ಯಾರಾದರೂ ಇದರ ಜವಾಬ್ದಾರಿ ತೆಗೆದುಕೊಳ್ಳಲಿ. ಏಕೆಂದರೆ, ನನಗೆ ಎಲ್ಲಿಯೋ ಒಂದು ಕಡೆ ಪರ್ಸನಲ್ ಇಂಟರೆಸ್ಟ್ ಬರಬಹುದು' ಎಂದು ಅನ್ನಿಸಿ That would have sent a beautiful message to the state. ಆದರೆ ತಾವು ಹಾಗೆ ಮಾಡಲಿಲ್ಲ. ಇವೊತ್ತು ಸುಪ್ರಿಂ ಕೋರ್ಟ್‌ನ ಜಡ್ಜ್‌ಮೆಂಟ್ ಹೀಗಿರುವಾಗ, ರಿವ್ಯೂ ಪಿಟಿಶನ್ ಏಕೆ ಹಾಕಲಿಲ್ಲವೆಂದು ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗಡೆಯವರು ಕೇಳಿದರು. ಅದಕ್ಕೆ ಡಾ॥ ಪರಮೇಶ್ವರ್‌ರವರು, ಈ ವರ್ಷ ಫೆಬ್ರವರಿ 19ನೇ ತಾರೀಖು Higher education Minister Dr. G. Parameshwar today said the Government would announce the rules pertaining to allotment of seats to professional courses within a week. ನಾವು ಈಗ 10.3.2003 ರಲ್ಲಿದ್ದೇವೆ. ಒಂದು ವಾರ ಆಯಿತು. ಅನಂತರ, ಏನೇನೋ ಹೇಳಿಕೊಂಡು ಬಂದಿದ್ದಾರೆ. When asked why the Government did not file a writ petition challenging the Court order on admissions to private professional institutions, The minister said: the Government had no problems in filing the petitition However it would have delayed the process. ಈಗ ಏನಾಗಿದೆ ಸ್ವಾಮಿ? ಸರ್ಕಾರ ಕನಿಷ್ಠ ಒಂದು ಮಾಡಬೇಕಾಗಿದ್ದುದು ಏನೆಂದರೆ ಅಕ್ಟೋಬರ್ 31 ನೇ ತಾರೀಖು ಬಂದಾಗ, ಈ ರೀತಿಯ ಗೊಂದಲ ನಿರ್ಮಾಣವಾದಾಗ, ಸನ್ಮಾನ್ಯ ಸಚಿವರೂ ಸೇರಿದಂತೆ ಎಲ್ಲರಿಗೂ ಕೂಡ

ಮೆರಿಟ್ ಸ್ಟೂಡೆಂಟ್ಸ್ ಬಗ್ಗೆ ಸಾಮಾಜಿಕ ನ್ಯಾಯದ ಬಗ್ಗೆ ಬಹಳ ಆತಂಕವುಂಟಾದಾಗ ಒಂದು ರಿವ್ಯೂ ಪಿಟಿಶನ್ ಹಾಕಿ ಆ ಜಡ್ಜ್‌ಮೆಂಟ್‌ಗೆ ಸ್ಟೇ ಕೊಡಿಸಬಹುದಾಗಿತ್ತು. ಆಗ ಅದು sincere effort ಆಗುತ್ತಿತ್ತು. ಮೂಗು ತಾನೆ ಬಾಯಿಬಿಡುವುದು!

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಅವರನ್ನು ಕಂಟ್ರೋಲ್ ಮಾಡುವುದಕ್ಕೆWe have nothing in your hand.

ಶ್ರೀ ಎಸ್. ಸುರೇಶ್‌ಕುಮಾರ್:- ಈ ಹಿನ್ನೆಲೆಯಲ್ಲಿ ನನಗೆ ಇವೊತ್ತು ಕೂಡ after say four months, ಸರ್ಕಾರ ಏಕೆ ರಿವ್ಯೂ ಪಿಟಿಶನ್ ಹಾಕಿ ಸ್ಟೇ ಕೇಳಲಿಲ್ಲ ಎನ್ನುವುದು it is a very big question for me.ಅಕಸ್ಮಾತ್ ಆ ಕೇಸ್‌ನಲ್ಲಿ ಸೋತು ಹೋದರೆ ಮ್ಯಾನೇಜ್‌ಮೆಂಟ್ ಬಹಳ ಸ್ಟ್ರಾಂಗ್ ಆಗುತ್ತದೆ, ನಾವು ಮಾತನಾಡುವುದಕ್ಕಾಗುವುದಿಲ್ಲವೆನ್ನುವುದು ಇವೆಲ್ಲವೂ ಹೈಪಾಥಿಟಿಕಲ್, ಸರ್ಕಾರ ತನ್ನ ಕರ್ತವ್ಯ ಮಾಡಬೇಕಾಗಿತ್ತು. ತನ್ನ ಕರ್ತವ್ಯ ನಿರ್ವಹಿಸಿ ಸ್ಟೇ ತೆಗೆದುಕೊಂಡಿದ್ದರೆ ಇವೊತ್ತು ಜಯಪ್ರಕಾಶ್ ಹೆಗಡೆಯವರು ಬರುತ್ತಿದ್ದರು, ನಾವು choosers ಆಗುತ್ತಿದ್ದೆವು ಆದರೆ, ಇವೊತ್ತು ನಾವು ಬೇರೆ ಆಗಿದ್ದೇವೆ. ಈ ತೀರ್ಪಿನಿಂದ ಬಹಳಷ್ಟು ಲಾಭ ಪಡೆಯುವುದು ಖಾಸಗಿ ಪ್ರೊಫೆಷನಲ್ ಕಾಲೇಜ್‌ನವರು. It is pure and simple. ಅವರಷ್ಟು ಲಾಭ ಇನ್ಯಾರಿಗೂ ದೊರಕುವುದಿಲ್ಲ, ಅವರು ಹಿಡಿಯಷ್ಟು ಜನರು, ಬಹಳ ಕಷ್ಟಪಡುವವರು ಈ ರಾಜ್ಯದಲ್ಲಿ ಸಿಇಟಿ ಎಂದು ಏನು ಹೆಸರು ಪಡೆದಿದೆ, ಅದರ ಮುಖಾಂತರ ಪ್ರೊಫೆಷನಲ್ ಕಾಲೇಜ್‌ಗೆ ಹೋಗಬೇಕೆಂದು ಏನು ಹಂಬಲವಿಟ್ಟುಕೊಂಡಿದ್ದಾರೆ, ಅವರು ಯಾವ ರೀತಿ ಓದುತ್ತಾರೆಂದು ನೋಡಿದರೆ ಗೊತ್ತಾಗುತ್ತದೆ. ದ್ವಿತೀಯ ಪಿಯುಸಿಯಲ್ಲಿ ಅವರು ಒಂದು ರೀತಿ ಸನ್ಯಾಸಿಗಳಾಗಿ ಬಿಡುತ್ತಾರೆ! ಆ ರೀತಿ ಓದುತ್ತಾರೆ. ಅವರು ಎಲ್ಲವನ್ನೂ ಕೂಡ ತ್ಯಾಗ ಮಾಡಿ ನಾನು ಪ್ರೊಫೆಷನಲ್ ಕೋರ್ಸ್‌ಗೆ ಹೋಗಬೇಕೆಂದು ಮುಂಚೆಯೇ ತೀರ್ಮಾನ ಮಾಡಿಕೊಂಡಿರುತ್ತಾರೆ, ಅವರದೇನೋ ಒಂದು mission ಇರುತ್ತದೆ. ಅವರು ಮೆಡಿಕಲ್, ಇಂಜಿನಿಯರಿಂಗ್‌ಗೆ ಹೋಗುತ್ತಾರೆಂದರೆ, we should admire those students. ಆ ರೀತಿ ಎಲ್ಲವನ್ನೂ ತ್ಯಾಗ ಮಾಡಿ ಓದುವ ಮಕ್ಕಳ ಜೊತೆ ಚೆಲ್ಲಾಟವಾಡುವ ಯಾವ ಸರ್ಕಾರಕ್ಕೆ ತಾನೆ ಭೂಷಣ ಬರುತ್ತದೆ? ಅವರೊಂದಿಗೆ ಚೆಲ್ಲಾಟವಾಡುವ ಯಾವ ಮ್ಯಾನೇಜ್‌ಮೆಂಟ್‌ಗೆ ತಾನೆ ಕಿರೀಟ ಬರುತ್ತದೆ? ಇವೊತ್ತು ಅವರ ಭವಿಷ್ಯವನ್ನು ಅಂಧಕಾರ ಮಾಡಿದ್ದೇವೆ. ಇವೊತ್ತು ಕೂಡ ಕಾಲ ಮಿಂಚಿಲ್ಲ. ತಡವಾಗಿರುವುದಕ್ಕೆ ಸರ್ಕಾರ ಕ್ಷಮೆ ಕೇಳಬೇಕು ಮತ್ತು condonation of delay ಕೇಳಿ ದಯವಿಟ್ಟು ರಿವ್ಯೂ ಪಿಟಿಶನ್ ಹಾಕಬೇಕು. ಇದನ್ನು ಹಾಕಿ ಸ್ಟೇ ತೆಗೆದುಕೊಳ್ಳಿ ಆಗ ಪರಿಸ್ಥಿತಿ ಬದಲಾವಣೆಯಾಗುತ್ತದೆ. we will be in a commanding position. ಇಲ್ಲದಿದ್ದರೆ ಏನಾಗುತ್ತದೆಂದರೆ, ಎಲ್ಲಾ ಖಾಸಗಿ ಕಾಲೇಜುಗಳ ಮೇಲೂ ಬೋರ್ಡ್ ಬರುತ್ತದೆ. ಇಂತಹವರ ಮೆಡಿಕಲ್ ಕಾಲೇಜ್ ಅನ್ನುವುದಲ್ಲ ಅದರ ಪಕ್ಕ ಒಂದು ಬೋರ್ಡ್ ಜೋರಾಗಿ ಬರುತ್ತದೆ. ಮಾನ್ಯ ಚೇರ್ಮನ್‌ರವರೆ, ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ಒಂದು ಹಾರ್ಟ್ ಆಸ್ಪತ್ರೆ ಇದೆ. ಅಲ್ಲೊಂದು ಬೋರ್ಡ್ ಹಾಕಿದ್ದಾರೆ: ನೀನು ಪೇಶೆಂಟ್ ಅನ್ನು ಸೇರಿಸುವುದಕ್ಕಿಂಥ ಮುಂಚೆ ನಿನ್ನ ರೇಟ್ ಕೇಳಿ ಸೇರಿಸು' ಎಂದು ಆದರೆ, ಅಲ್ಲಿಗೆ ನಾವು ಹಾರ್ಟ್ ಅಟ್ಯಾಕ್ ಆಗಿರುವ ಪೇಶೆಂಟ್ ಅನ್ನು ಕರೆದುಕೊಂಡು ಹೋಗಿರುವುದು! ಅಂತಹ ಆಸ್ಪತ್ರೆಗಳು ಬೆಂಗಳೂರಿನಲ್ಲಿವೆ. ಅಂತಹ ಆಸ್ಪತ್ರೆಗಳು ಇನ್ನೂ ಜಾಸ್ತಿಯಾಗುತ್ತವೆ. ಜೊತೆಗೆ ಅಂತಹ ಡಾಕ್ಟರ್‌ಗಳೂ ಸಹ ಇನ್ನೂ

ಜಾಸ್ತಿಯಾಗುತ್ತಾರೆ. ಇದರ ಬಗ್ಗೆ ರಾಜ್ಯ ಸರ್ಕಾರ ಯಾವುದೇ ಮುಲಾಜಿಗೆ, ವಶೀಲಿಗೊಳಗಾಗಿ ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಆ ಕಾಲೇಜುಗಳ ಮೇಲೆ ಏನೆಂದು ಬೋರ್ಡ್ ಬರುತ್ತದೆ ಗೊತ್ತೇ? "If you are a millionaire, please step in. If you have only merit, please get out" ಎಂದು ಬರುತ್ತದೆ That will be the board. ಇದು ಎಲ್ಲಾ ಕಾಲೇಜುಗಳ ಮೇಲೂ ರಾರಾಜಿಸುತ್ತದೆ. ಅವರಿಗೆ ಮೆರಿಟ್ ಬೇಡ, ಏನೂ ಬೇಡ. ನಾವು ಅದನ್ನು ಸಹಿಸಬೇಕೆ? ಸಹಿಸಿಕೊಂಡು ಹೋಗಬೇಕೆ? ಈ ಹಿನ್ನೆಲೆಯಲ್ಲಿ ನಾನು ರಾಜ್ಯ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ಇದನ್ನು ಇನ್ನಷ್ಟು $4^{th}$, $5^{th}$, $6^{th}$ ರೌಂಡ್‌ಗೆ ಮಾಡದೆ, ನಿಮ್ಮ ಅಸಹಾಯಕತನ ತೋರಿಸದೆ don't become weak. Contradictions ಇದೆಯಲ್ಲಾ ಅದರ ಲಾಭವನ್ನಾದರೂ ತೆಗೆದುಕೊಳ್ಳಿ ಇಲ್ಲದಿದ್ದರೆ ಸುಪ್ರಿಂ ಕೋರ್ಟ್‌ಗೆ ಅವರು ಹೋಗಿ, ಕೈಯಲ್ಲಿ ಜೇನು ತುಪ್ಪ ಸಿಕ್ಕಿರುವಾಗ ಅವರೇಕೆ ನಿಮ್ಮದನ್ನು ಒಪ್ಪಿಕೊಳ್ಳುತ್ತಾರೆ? ನೀವು ಹೇಳಿದ ಫೀ ಸ್ಟ್ರಕ್ಚರ್ ಅನ್ನು ಅವರೇಕೆ ಒಪ್ಪಿಕೊಳ್ಳುತ್ತಾರೆ? ಜೊತೆಗೆ ದುರದೃಷ್ಟವಶಾತ್ ಬಹಳಷ್ಟು ಇಂಜಿನಿಯರಿಂಗ್ ಮತ್ತು ಪ್ರೊಫೆಷನಲ್ ಕಾಲೇಜುಗಳನ್ನು ನಡೆಸುತ್ತಿರುವವರು ರಾಜ್ಯದ ಆಳುವ ಪಕ್ಷದವರು. ಇವರು ಕಾಲೇಜುಗಳನ್ನು ನಡೆಸುತ್ತಿದ್ದಾಗ ಅವರು ಯಾವ ರೀತಿ ತಾನೆ ನೀವು ಕುಳಿತಾಗ how they will concede to your demands? ಇದೊಂದು ದೊಡ್ಡ ಪ್ರಶ್ನೆ.

**ಶ್ರೀ ಕೆ.ಜಯಪ್ರಕಾಶ್ ಹೆಗಡೆ:-** ಆಳುವ ಪಕ್ಷದಲ್ಲಿರುವ ಯಾರ್‍ಯಾರು ಕಾಲೇಜುಗಳನ್ನು ನಡೆಸುತ್ತಿದ್ದಾರೋ ಅವರೆಲ್ಲರೂ 'ನಾವು ಅಡ್ಮಿಟ್ ಮಾಡಿಕೊಳ್ಳುತ್ತೇವೆ' ಎಂದು ಮೊದಲು ಒಂದು ಸ್ಟೇಟ್‌ಮೆಂಟ್ ಕೊಡಲಿ.

**Sri S. Suresh Kumar:-** I am coming to that, ಮಾನ್ಯ ಛೇರ್ಮನ್‌ರವರೆ, ವೀರಪ್ಪ ಮೊಯಿಲಿಯವರು, None other than the former Chief Minister of Karnataka. ಅವರು ಒಂದು ಹೇಳಿಕೆ ಕೊಟ್ಟಿದ್ದಾರೆ. The Former Chief Minister and senior Congress leader M. Veerappa Moily has sharply brought out the fact that middle and poor classes of the society will get Severely affected and the injustice and discontent among the eudcated middle and lower classes of the society will certainly get reflected in the results of the next General elections.

ಹುಮನಾಬಾದ್ ಎಲೆಕ್ಷನ್ಸ್‌ಗಿಂತ ಮುಂಚೆ ಹೇಳಿದ್ದು. The Ruling party will end up paying a heavy price even though the other important political parties are also supporting the managments tacitly the ire of the people will be directed against the Ruling party and not against the opposition parties. ಇದು ಎಲೆಕ್ಷನ್, ಗಿಲೆಕ್ಷನ್ ಅಲ್ಲ ಬೇರೆ ಪ್ರಶ್ನೆ. ಆದರೆ ಒಬ್ಬ ಸೀನಿಯರ್ ಲೀಡರ್ ಅವರು ನಮ್ಮ ಮುಖ್ಯಮಂತ್ರಿಗಳು ಆಗಿದ್ದರು. ಅವರಿಗೂ ಕೂಡ ಈ ಪರಿಸ್ಥಿತಿಯ ಆಗಾಧತೆ ಅನಿಸಿದೆ ಅವರೂ ಕೂಡ ಸರ್ಕಾರ ಏನು ಮಾಡಬೇಕಾಗಿತ್ತೋ ಅದನ್ನು ಮಾಡುತ್ತಿಲ್ಲ. ಮಾಡದೇ ಇದ್ದರೆ ಬಹಳ ದೊಡ್ಡ ಅನಾಹುತ ಕಾದಿದೆ ಎಂದು ಅವರಿಗೆ ಕೂಡ ಅನಿಸಿದೆ. ಇವತ್ತು ನಾನು ಹೇಳುವುದು ತುಂಬಾ Exaggeration ಎಂದು ಅನ್ನಿಸಬಹುದು. ಆದರೆ ಯಾರ್‍ಯಾರ ಹತ್ತಿರ

ಬಂದು ಆ ಹುಡುಗರು ಮಾತನಾಡಿದ್ದಾರೆ ಅದನ್ನು ನೋಡಿದಾಗ, ಅವರ ಆತಂಕ, ನೋವು ಇವೆಲ್ಲವನ್ನೂ ಕೂಡ ನೋಡಿದಾಗ 'ಗಾಡ್ ಪರ್ಮಿಟ್' ನಾವು ರೈತರ ಆತ್ಮಹತ್ಯೆಯನ್ನು ನೋಡಿದ್ದೇವೆ. ನೇಕಾರರ ಆತ್ಮಹತ್ಯೆ ಬಗ್ಗೆ ಕೇಳಿದ್ದೇವೆ. ದಯವಿಟ್ಟು ಮುಂದಿನ ಸರದಿ ಈ ರಾಜ್ಯದಲ್ಲಿ ಆ ಆಸೆ ಇಟ್ಟುಕೊಂಡು ಹತ್ತು ಹನ್ನೆರಡು ವರ್ಷ ಓದಿ ಪ್ರತಿಭೆ ಇಟ್ಟುಕೊಂಡು, ಆದರೆ ದುಡ್ಡು ಇಲ್ಲದೇ ಇರುವ ವಿದ್ಯಾರ್ಥಿಗಳ ಸರದಿ ಮುಂದಿನ ಸರದಿ ಆಗಬಾರದು ಎಂದು ನನ್ನ ಕಳಕಳಿಯ ಅನಿಸಿಕೆ. ಅದಕ್ಕೆ ಮಾತ್ರ ಈ ಸದನ ಅವಕಾಶ ಕೊಡಬಾರದು. We should assert ourselves. ಇವತ್ತು ಸರ್ಕಾರ ಅಗತ್ಯ ಕ್ರಮ ತೆಗೆದುಕೊಳ್ಳದಿದ್ದರೆ ವಿದ್ಯಾರ್ಥಿಗಳಿಗೆ ಸೀಟು ದೊರಕುವುದಿಲ್ಲ. ಸೀಟು ದೊರಕಿದರೂ ಕೂಡ ಅವರು ಹೇಳುವ ಫೀಸ್ ಕೊಡುವುದಕ್ಕೆ ಆಗುವುದಿಲ್ಲ. ನಾನು ಸುಮ್ಮನೆ ಯೋಚಿಸಿದೆ. ಎಷ್ಟು ಜನಕ್ಕೆ ಪ್ರತಿ ವರ್ಷ ಅವರ ಮಕ್ಕಳನ್ನು ಡಾಕ್ಟರ್‌ಗಿರಿ ಓದಿಸುವುದಕ್ಕೆ ಪ್ರತಿ ವರ್ಷ ಮೂರು ಲಕ್ಷ ರೂ. ಕೊಡುವುದಕ್ಕೆ ಸಾಧ್ಯ ಇದೆಯಾ ಎಂದು ಯೋಚಿಸಿದೆ. ಮೂರು ಲಕ್ಷ ರೂಪಾಯಿ ಪ್ರತಿ ವರ್ಷ ಕೊಡಬೇಕು, ಎಷ್ಟು ಜನಕ್ಕೆ ಸಾಧ್ಯತೆ ಇದೆ? ಆ ಮೂರು ಲಕ್ಷ ರೂ ಕೊಟ್ಟು ಓದಿಸುವವರು ಎಂಥವರು ಎನ್ನುವದನ್ನೂ ಕೂಡ ನಾವು ನೋಡಿದ್ದೇವೆ. ಅವರಿಂದ ನೀವೇನು ಸಮಾಜಕ್ಕೆ ಸಹಾಯ, ನೆರವು ಬಯಸುವುದಕ್ಕೆ ಸಾಧ್ಯ ಇದೆ? ಅವರಿಗೂ ನಮ್ಮ ರಾಜ್ಯ ಬಗ್ಗೆ ಕಮಿಟ್‌ಮೆಂಟ್ ಬರಬೇಕಲ್ಲಾ. For them, it is a pure and simple investment, ನಾನು ಹನ್ನೆರಡು ಲಕ್ಷ ರೂಪಾಯಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದೇನೆ. ಆಮೇಲೆ ಮುಂದೆ ತೆಗೆದುಕೊಳ್ಳುತ್ತೇನೆ ಎನ್ನುವ ಭಾವನೆ ನಾರ್ಮಲ್ ಡೆಲವರಿಗೂ ಸಿಸೇರಿಯನ್ ಮಾಡುತ್ತೇನೆ ಸುಮ್ಮಸುಮ್ಮನೆ ಯಾವುದೋ ಲ್ಯಾಬ್‌ಗೆ ಕಳುಹಿಸುತ್ತೇನೆ, ಈ ರೀತಿಯ ಮನಸ್ಥಿತಿಯನ್ನು ಈ ರೀತಿ ಮೈಂಡ್ ಸೆಟ್ಟಿನ ಡಾಕ್ಟರನ್ನು ನಾವು ಯಾರು ಮಾಡಬೇಕಾ? ಅದನ್ನೂ ಕೂಡ ನಾವು ಇವತ್ತು ಯೋಚಿಸಬೇಕು. ಇವತ್ತು ಮಾನ್ಯ ನಮ್ಮ ಜಯಪ್ರಕಾಶ್ ಹೆಗಡೆ ಅವರು ಹೇಳಿದ ಹಾಗೆ ಮೊದಲು ಯಾರು ರಾಜಕೀಯ ನಾಯಕರುಗಳು ಇರೆಸ್ಪೆಕ್ಟೀವ್ ಆಫ್ ದಿ ಪಾರ್ಟಿ, ಯಾರ್‍ಯಾರೋ ತಮ್ಮ ಚಪ್ಪಲಿಯನ್ನೇ ಫ್ಲಾಟ್ ಫಾರಂ ಎಂದು ತಿಳಿದುಕೊಂಡು ಬಿಡುತ್ತಾರೆ. ಪಬ್ಲಿಕ್ ಪ್ಲಾಟ್‌ಫಾರಂ ಎಂದು ತಿಳಿದುಕೊಂಡು ಬಿಡುತ್ತಾರೆ. ಸಿಕ್ಕಿದ ಕಡೆ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುತ್ತಾರೆ. ಸಿಕ್ಕಿದ ಕಡೆ ಮೆರಿಟ್ ಬಗ್ಗೆ ಮಾತನಾಡುತ್ತಾರೆ. They should come forward. ಏನಾದರೂ ಆಗಲಿ ಬಿಡಿರಿ, ನಾನು ನನ್ನ ಕಾಲೇಜಿನಲ್ಲಿ ಮುಂಚೆ ಇದ್ದಂತಹ ವ್ಯವಸ್ಥೆಗೆ ಒಪ್ಪಿಕೊಳ್ಳುತ್ತೇನೆ, ಮುಂಚೆ ಇದ್ದಷ್ಟೇ ಮೆರಿಟೆಡ್ ಸ್ಟೂಡೆಂಟ್ಸ್‌ಗೆ ಅಡ್ಮಿಷನ್ ಕೊಡುತ್ತೇನೆ. I will not wait for this negotiation ಎಂತ ರಾಜಕೀಯ ನಾಯಕರುಗಳು ಹೇಳುತ್ತಾರಾ? ಆಗ ಅವರ ಬದ್ದತೆ ತೋರಿಸುತ್ತದೆ. It may be a parliament member, it may be a M.L.C., it may be a minister, it may be a M.L.A. ಯಾರೇ ಇರಬಹುದು. ಅವರ ಬದ್ಧತೆ ತೋರಿಸಬೇಕು ಎಂದರೆ ಅವರು ಇವತ್ತು ಬಂದು ಘೋಷಿಸಲಿ. ನಾನು ಸುಪ್ರಿಂ ಕೋರ್ಟಿನ ತೀರ್ಪಿನಿಂದ ಸಮಾಜಕ್ಕೆ ಅನ್ಯಾಯ ಆಗುವುದಕ್ಕೆ ನನ್ನ ಕಾಲೇಜಿನಲ್ಲಿ ಬಿಡುವುದಿಲ್ಲ ಎಂದು ಹೇಳಲಿ. ಆದರ ಜೊತೆ ಜೊತೆಗೆನೇ ಅನೇಕ ಧಾರ್ಮಿಕ ಸಂಸ್ಥೆಗಳು ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜನ್ನು ನಡೆಸುತ್ತಿವೆ. ಅವರದ್ದೂ ಕೂಡ ಇದರಲ್ಲಿ ಪಾತ್ರ ಇದೆ. They should become rolemodels. ಇಲ್ಲದೇ ಇದ್ದರೆ ಅವರಿಗೆ ಮತ್ತೆ ಎಜುಕೇಶನ್ ಅನ್ನು ಒಂದು ಬಿಸಿನೆಸ್ ಎಂದು ತಿಳಿದುಕೊಂಡು, ಎಜುಕೇಷನ್ ಒಂದು ಇಂಡಸ್ಟ್ರೀ

ಎಂದು ತಿಳಿದುಕೊಂಡು, ಎಜುಕೇಷನ್ ಅನ್ನು ಒಂದು ದಂಧೆ ಎಂದು ತಿಳಿದುಕೊಂಡು ಯಾರು ಈ ಕ್ಷೇತ್ರದಲ್ಲಿ ಅಪಚಾರ ಮಾಡುತ್ತಿದ್ದಾರೆ ಅವರಿಗೆ ಮತ್ತು ಇವರಿಗೂ ವ್ಯತ್ಯಾಸ ಇರುವುದಿಲ್ಲ. ಅವರೂ ಕೂಡ ನಾಡಿನ ಭವಿಷ್ಯದ ದೃಷ್ಟಿಯಿಂದ ಯೋಚನೆ ಮಾಡಿ ಒಂದು ನಿರ್ಧಾರವನ್ನು ಈ ರಾಜಕೀಯ ನಾಯಕರ ತರಹ ಅವರೂ ಘೋಷಿಸಲಿ ಆಗ ಪ್ರಾಯಶಃ ರಾಜಕೀಯ ನಾಯಕರುಗಳ ಬಗ್ಗೆ ಸಮಾಜದಲ್ಲಿ ತಿರಸ್ಕಾರ ಏನು ಇದೆ. ಅದು ದೂರವಾಗುವುದಕ್ಕೆ The golden opportunity is before us. ಧಾರ್ಮಿಕ ಸಂಸ್ಥೆಗಳಿಗೆ ಕೂಡ ಇದೊಂದು ಗೋಲ್ಡನ್ ಆಪರ್ಚುನಿಟಿ. ಇದನ್ನು ನಾವು ಈ ಸದನದಿಂದ ಒಂದು ಸಂಕೇತವನ್ನು ಕಳುಹಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್:- ತಾವೇನು ಹೇಳಿದಿರಿ? ಅವರೆಲ್ಲಾ ಘೋಷಣೆ ಮಾಡಬೇಕು ಎಂದು ಇದರಿಂದ ಒಂದು ಗೋಲ್ಡನ್ ಆಪರ್ಚುನಿಟಿ ಎಂದು ಹೇಳಿದಿರಲ್ಲಾ, ಈಗಾಗಲೇ ಅವರೆಲ್ಲಾ ಕೋರ್ಟಿಗೆ ಹೋಗಿ ತಮ್ಮ ಕಡೆ ಮಾಡಿಕೊಂಡು ಬಂದಿದ್ದಾರೆ, ಅದು ಆಗದ ಮಾತು ಸರ್ಕಾರ ಏನಾದರೂ ನಿರ್ಣಯ ತೆಗೆದುಕೊಂಡು ಇದನ್ನು ಮಾಡಬೇಕೇ ಹೊರತು ಅವರು ಹೇಳುವುದಿಲ್ಲ. ಸುಮ್ಮನೇ ಇದೊಂದು ಬೇಡಿಕೆ. ತಾವೇನೋ ಒಂದು ಕಳಕಳಿಯಿಂದ ಇಷ್ಟು ಹೇಳುತ್ತಿದ್ದೀರಿ, ಸಂತೋಷ ಆದರೆ ಸರ್ಕಾರ ಇದನ್ನು ಮಾಡದೇ ಇದ್ದರೆ ಇದಾಗುವುದಿಲ್ಲ.

**Sri S. Suresh Kumar:-** Hoping is a crime, when there are no reasons to hope. We are all criminals committing that crime of hoping. Let us hope. ಏನೋ ಆಗಬಹುದು, ಏನೋ ಆಗಲಿ ಎಂದು ಭಾವಿಸಿಕೊಳ್ಳಬಹುದು. ಅದು ಇವತ್ತು ಇಮ್ಮಿಡಿಯಟ್ ಆಗಿ ನಾನು ಫೋರ್ತ್ ರೌಂಡ್‌ನಲ್ಲಿ ಅವರೇನಾದರೂ ಹೇಳಿ ಬಿಟ್ಟರೆ ಪ್ರಾಯಶಃ ನಿಮ್ಮ ಸಿಇಟಿ ಬಹಳ ಚೆನ್ನಾಗಿ ಆಗುವುದಕ್ಕೆ ಅವಕಾಶ ಇದೆ. ಯಾವ ರೀತಿ ಇಂಟರ್‌ಪ್ರೆಟೇಷನ್ಸ್ ಆಗುತ್ತದೆ ಎನ್ನುವುದಕ್ಕೆ, ಯಾವ ರೀತಿ ಇದರಿಂದ ತೊಂದರೆ ಆಗುತ್ತದೆ ಎನ್ನುವುದಕ್ಕೆ ಸುಪ್ರೀಂ ಕೋರ್ಟಿನ ತೀರ್ಪನ್ನು ತಿರುಚಿದರೆ ಶಿಕ್ಷಣವನ್ನು ವ್ಯಾಪಾರ ಎಂದು ತಿಳಿದುಕೊಂಡರೆ ಏನಾಗಬಹುದು? ಸುಪ್ರೀಂ ಕೋರ್ಟ್ ಬಹಳ ಸ್ಪೆಸಿಫಿಕ್ ಆಗಿ ಹೇಳಿರುವುದು It is a charitable. ಎಂದು ಎಜುಕೇಶನ್ ಕೊಡುವುದು ಒಂದು ಛಾರಿಟಬಲ್ ಥಿಂಗ್ ಎಂದು ಹೇಳಿದ್ದಾರೆ. ಶಿಕ್ಷಣದ ಉದ್ದೇಶ ಸೇವೆ. ಆದರೆ ಇವತ್ತು ನಮ್ಮ ಮುಂದೆ ಆಗುತ್ತಿರುವುದು ಶಿಕ್ಷಣ ಮಾರಾಟ. seats are being sold. ನಾನು ಬಹಳ ಹಿಂದೆ ಒಂದು ಘಟನೆಯನ್ನು ಓದಿದ್ದೆ. ಬೆಂಗಳೂರಿನಲ್ಲಿ ಯಾವನೋ ಒಬ್ಬ ಬಿಸಿನೆಸ್ ಮಾಡಬೇಕು ಎಂದು ಯೋಚಿಸಿದ. ಏನು ಬಿಸಿನೆಸ್ ಮಾಡುವುದು? ಪಾತ್ರೆ ಅಂಗಡಿ ಇದೆ. ಮಾತ್ರೆ ಅಂಗಡಿ ಇದೆ. ಬಟ್ಟೆ ಅಂಗಡಿ ಇದೆ. ಟಿವಿ ಅಂಗಡಿ ಇದೆ. ಆದ್ದರಿಂದ ಅವನು ಹೊಸ ಬಿಸಿನೆಸ್ ಮಾಡಿದ. ಏನು ಮಾಡಿದ? ನಮ್ಮಲ್ಲಿ ಡಿಗ್ರಿಗಳನ್ನು ಮಾರಾಲಾಗುತ್ತದೆ ಎಂದು ಅವನು ಒಂದು ಬೋರ್ಡ್ ಹಾಕಿದ. ಬಿಎಸ್‌ಸಿ ಡಿಗ್ರಿಗೆ 8 ಸಾವಿರ ರೂಪಾಯಿ. ಬಿಕಾಂ ಆದರೆ 5 ಸಾವಿರ ರೂಪಾಯಿ ಎಂಬಿಎ ಆದರೆ ಒಂದೂವರೆ ಲಕ್ಷ ರೂಪಾಯಿ ಎಂದು ಹೇಳಿ ಈ ರೀತಿ ಒಂದು ಬೋರ್ಡ್ ಹಾಕಿದ. ದಾರಿಯಲ್ಲಿ ಎಲ್ಲೋ ಸ್ವಲ್ಪ ದೂರದಲ್ಲಿದ್ದ ಒಬ್ಬ ಜಮೀನ್ದಾರನಿಗೆ ಅನಿಸಿತಂತೆ. ಇಲ್ಲಿ ಎಲ್ಲೋ ಬೆಂಗಳೂರಿನಲ್ಲಿ ಫ್ರೀ ಆಗಿ ಡಿಗ್ರೀ ಸಿಗುತ್ತದೆಂತೆ, ಓದಲೇ ಇದ್ದರೂ ಡಿಗ್ರಿ ಸಿಗುತ್ತದೆ ಅಂತೆ. ನಾನೂ ಒಬ್ಬ ಡಿಗ್ರೀ ಹೋಲ್ಡರ್ ಆಗಬೇಕೆಂದು ಹೇಳಿ ತನ್ನ ಕುದುರೆಯ ಮೇಲೆ ಬಂದ ಬಂದು ಬಿಟ್ಟು ಐದು ಸಾವಿರ ರೂಪಾಯಿ ಇಟ್ಟ ಬೆಳಿಗ್ಗೆ 7 ಗಂಟೆಗೆ ಅವನಿಗೂ ಬಹಳ ಖುಷಿ ಆಯಿತು. ಬೋಣಿ ನನಗೆ

ಚೆನ್ನಾಗಿ ಆಗುತ್ತಿದೆ ಎಂದು ಜಮೀನ್ದಾರನ ಹೆಸರು ಕೇಳಿದ, ಹೆಸರನ್ನು ಪ್ರಿಂಟ್ ಮಾಡಿದ, ಡಿಗ್ರಿ ಕೊಟ್ಟ. ಪೀಣ್ಯ ಹತ್ತಿರ ಹೋಗುತ್ತಾ ಜಮೀನ್ದಾರನಿಗೆ ಅನಿಸಿತು, ಐದು ಸಾವಿರ ರೂಪಾಯಿಗೆ ನನಗೆ ಡಿಗ್ರಿ ಸಿಕ್ಕಿತು. ನನ್ನ ಕುದುರೆಗೆ ಏಕೆ ಒಂದು ಡಿಗ್ರಿ ತೆಗೆದುಕೊಳ್ಳಬಾರದು ಎಂದು ಅನಿಸಿತು. ಹೇಗಿದ್ದರೂ ಕಾಸು ಕೊಟ್ಟರೆ ಡಿಗ್ರೀ ಸಿಗುತ್ತದಲ್ಲಾ ಎಂದು ಮತ್ತೆ ವಾಪಸ್ ಬಂದ ಒಂದು ಮತ್ತೆ ಐದು ಸಾವಿರ ರೂಪಾಯಿ ಇಟ್ಟ ಅಂಗಡಿಯವ ಒಬ್ಬರಿಗೆ ಎರಡು ಡಿಗ್ರಿ ಕೊಡುವುದಿಲ್ಲ ಎಂದು ಹೇಳಿದ ಆಗ ಅವನು ಇಲ್ಲ ನನಗೆ ಅಲ್ಲ, ನನ್ನ ಕುದುರೆಗೆ ಡಿಗ್ರಿ ಕೊಡಿ ಎಂದ ಇಲ್ಲ ಸಾರ್ ಕುದುರೆಗೆ ಎಲ್ಲಾ ಡಿಗ್ರಿ ಕೊಡುವುದಿಲ್ಲ ಎಂದಾಗ ಇವನು ಬಿಡುತ್ತಲೇ ಇಲ್ಲ. ನಿಮಗೆ ಇನ್ನೂ ಒಂದು ಸಾವಿರ ರೂಪಾಯಿ ಜಾಸ್ತಿ ಬೇಕಿನ್ರಿ, ತೆಗೆದುಕೊಂಡು ಕೊಡ್ರಿ ಎಂದು ಜಮೀನ್ದಾರ. ಕೊನೆಗೆ ಅಂಗಡಿಯವ ಹೇಳಿದ ಸಾರ್ ನಮ್ಮ ಅಂಗಡಿಯಲ್ಲಿ ಕುದುರೆಗೆಲ್ಲಾ ಡಿಗ್ರಿ ಕೊಡುವುದಿಲ್ಲ, ಕತ್ತೆಗಳಿಗೆ ಮಾತ್ರ ನಾವು ಡಿಗ್ರಿ ಕೊಡುವುದು ಅಂದ. ಇವತ್ತು ಆ ಒಂದು ಪರಿಸ್ಥಿತಿಗೆ ಬಂದಿದೆ. ಶಿಕ್ಷಣ ಎನ್ನುವುದು ಒಂದು ಮಾರಾಟವಾಗಿ ಹೋಗುತ್ತಿದೆ. ಸುಪ್ರೀಂ ಕೋರ್ಟಿನ ಜಜ್ಡ್‌ಮೆಂಟ್‌ನಲ್ಲಿ ಬಹಳ ಕ್ಲಿಯರ್ ಆಗಿ ಹೇಳಿದ್ದಾರೆ. ಶಿಕ್ಷಣ ಮಾರುಕಟ್ಟೆಯ ವಸ್ತು ಅಲ್ಲ ಎಂದು ಹೇಳಿದ್ದಾರೆ. ಇವತ್ತು ಶಿಕ್ಷಣ ವ್ಯಾಪಾರೀಕರಣ, ಆಗುತ್ತಿದೆ. ಶಿಕ್ಷಣ ವಾಣಿಜ್ಯ ಚಟುವಟಿಕೆ ಅಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಶಿಕ್ಷಣದ ವಾಣಿಜ್ಯೀಕರಣ ಆಗುತ್ತದೆ. ಶಿಕ್ಷಣ ಲಾಭದಾಯಕವಾಗಬಾರದು. ಸುಪ್ರೀಂ ಕೋರ್ಟ್ ಹೇಳಿತು. ಶಿಕ್ಷಣದ ಲಾಭಗಳು? ಇವತ್ತು ಪೇಪರ್‌ನಲ್ಲಿ ಓದುತ್ತಿರುವುದನ್ನು ಕೇಳಿದರೆ ಇವತ್ತು ಇದುವರೆಗೂ ಇಂಜಿನಿಯರಿಂಗ್ ಮೆರಿಟ್ ಸರ್ಕಾರಿ ಕಾಲೇಜಿಗೆ 8950 ರೂಪಾಯಿ ಇದೆ. ಖಾಸಗಿ ಕಾಲೇಜಿನಲ್ಲಿ ಮೆರಿಟ್‌ಗೆ 11,590 ರೂಪಾಯಿ ಇದೆ. ಇವತ್ತು ಖಾಸಗಿ ಮತ್ತು ಸರ್ಕಾರೀ ಎಂದು ತೆಗೆದರೆ ಮೆರಿಟ್ ಪೇಮೆಂಟ್‌ಗೆ 30 ಸಾವಿರದಿಂದ 50 ಸಾವಿರ ರೂಪಾಯಿ ಪರ್ ಇಯರ್ ಆಗುತ್ತದೆ. ಎಲ್ಲಿ 11,590, ಎಲ್ಲಿ 50 ಸಾವಿರ ರೂಪಾಯಿ ವೈದ್ಯಕೀಯ ಮೆರಿಟ್ 16200 ರೂಪಾಯಿ, ಪೇಮೆಂಟ್ 1 ಲಕ್ಷದ 22 ಸಾವಿರ ರೂಪಾಯಿ. ಇವತ್ತು ಮೆರಿಟ್ ಪೇಮೆಂಟ್ 3 ಲಕ್ಷ ರೂಪಾಯಿ ಆಗುತ್ತದೆ. ಡೆಂಟಲ್ - 13900 ರೂಪಾಯಿ ಮೆರಿಟ್‌ಗೆ, ಪೇಮೆಂಟ್ - 87,500, ರೂಪಾಯಿ ಮೆರಿಟ್ ಪೇಮೆಂಟ್‌ಗೆ 2 ಲಕ್ಷ ರೂಪಾಯಿ ಆಗುತ್ತದೆ. ಈ ರೀತಿ ಆಗಿ ಬಿಟ್ಟರೆ ನಮ್ಮ ನಾಡಿಗೆ ಧಾವಿಸಿ ಧಾವಿಸಿ ಏನು ಬರುತ್ತಿದ್ದಾರೆ ಬಹಳ ಒಳ್ಳೆಯ ಸಿಟಿ ಇದೆ, ಅಯ್ಯೋ ಆ ಸಿಟಿ ಟೈಮಿನಲ್ಲಿ ಬೆಂಗಳೂರಿನಲ್ಲಿ ಹೋಟೆಲ್‌ನಲ್ಲಿ ರೂಮು ಸಿಗುವುದಿಲ್ಲ ಎಂದು ಹೇಳಿ ಅಷ್ಟು ಒಳ್ಳೆಯ ಹೆಸರು ತೆಗೆದುಕೊಂಡಿದೆ ಸಿಟಿ. ಅಂತಹ ಒಂದು ಒಳ್ಳೆಯ ಹೆಸರನ್ನು ಇವತ್ತು ನಾವು ಕಳೆದುಕೊಳ್ಳುತ್ತೇವೆ ಒಂದು ರೀತಿ ನಮ್ಮ ರಾಜ್ಯದ ಮಾನ ಮತ್ತು ಸ್ಥಾನ ನಷ್ಟ ಆಗುತ್ತದೆ. ಇಷ್ಟು ನಾನು ಹೇಳುತ್ತಾ ಸರ್ಕಾರ ಏನು ಮಾಡಬೇಕು ಎಂಬ ಬಗ್ಗೆ ನನ್ನ ಆಗ್ರಹ ಇದೆ.

ಮೊದಲನೆಯದಾಗಿ, ಸರ್ಕಾರ ತಾನು ಹೆಲ್ಪ್‌ಲೆಸ್ ಎಂದು ತೋರಿಸುವುದನ್ನು ದಯವಿಟ್ಟು ಬಿಟ್ಟು ಬಿಡಬೇಕು. ಬಲಹೀನತೆಯ ಪ್ರದರ್ಶನ ಯಾವುದಕ್ಕೂ ಒಳ್ಳೆಯದಲ್ಲ. ನೀವು Strong ಎಂದು ತೋರಿಸಿ you are a State, not only a Government, State ಎಂದರೆ ಅದಕ್ಕೆ ಯಾವ ಶಕ್ತಿ ಇರುತ್ತದೋ, ಆ State ನ ಶಕ್ತಿ ಎಲ್ಲೂ ಕೂಡ ಇವತ್ತು ಕಾಣಿಸುತ್ತಿಲ್ಲ. ನನಗೆ ಈ ಮಾತುಕತೆ ನಡೆಯುತ್ತಿರುವಾಗ, ಆ ಗೌರ್‍ನಮೆಂಟ್ ಮ್ಯಾನೇಜ್‌ಮೆಂಟ್ ಜೊತೆಗೆ ಮಾತನಾಡುತ್ತಿದೆ ಎಂದು ಅನ್ನಿಸುತ್ತಲೇ ಇಲ್ಲ One managment person, who

incidentally is in the Government is speaking to other managment person. ಆ ಒಂದು ಬಾವನೆ ಇಡೀ ರಾಜ್ಯದಲ್ಲಿ ಇವತ್ತು ಇದೆ. ಅದು ಆಗಬಾರದು ಎನ್ನುವಂತಿದ್ದರೆ, you show your strength, you asert ಅದಕ್ಕಿಂತ Important ಡಾ॥ ಪರಮೇಶ್ವರ್‌ರವರು ತಪ್ಪು ತಿಳಿದುಕೊಳ್ಳಬಾರದು, ದಯವಿಟ್ಟು ಯಾವುದೇ ಕಾಲೇಜುಗಳನ್ನು ಇಟ್ಟುಕೊಂಡಿಲ್ಲದೇ ಇರುವ ವ್ಯಕ್ತಿಯನ್ನು ಈ ಮಾತುಕತೆಗೆ ಇನ್ನು ಮೇಲೆ ಕಳುಹಿಸಿ. ಅವರಿಂದ ಏನಾದರೂ ಆಗುತ್ತದೆಯೋ ಎಂದು ನಾವು ನೋಡೋಣ. ಎರಡನೆಯದಾಗಿ, ಸಾಮಾನ್ಯ ಪ್ರವೇಶ ಪರೀಕ್ಷೆ CET ಏನಿದೆ, ಅದನ್ನು ಸರ್ಕಾರವೇ ಮಾಡುತ್ತದೆ ಎಂದು ತೀರ್ಮಾನವನ್ನು ತೆಗೆದುಕೊಳ್ಳಿ. ಅದನ್ನು ಎಲ್ಲಾ ಕಾಲೇಜುಗಳವರು ಒಪ್ಪಿಕೊಳ್ಳಬೇಕು ಎನ್ನುವುದಕ್ಕೆ ಕಾಯ್ದೆ ಬೇಕಾದರೆ ನಾವು ಮಾಡೋಣ. Let us come forward with legislation, if it is necessary. ಇದೇ ಸೆಷನ್‌ನಲ್ಲಿ 31ನೇ ತಾರೀಖಿನವರೆಗೆ ಏನು ನಡೆಯುತ್ತದೆಯೋ, ಈ ಸೆಷನ್‌ನಲ್ಲೇ ನಾವು ಅಗತ್ಯವಾದಂತಹ ಒಂದು ಲೆಜಿಸ್ಲೇಷನ್ ಅನ್ನು ನಾವು ತರೋಣ, ತರಬೇಕು. ಇವತ್ತು VAT ಗೆ ಎಷ್ಟು ಅರ್ಜೆಂಟ್ ಮಾಡಿದರೋ, ಅದಕ್ಕಿಂತ ಅರ್ಜೆಂಟಾಗಿ ನಾವು ಆ ಕೆಲಸವನ್ನು ಮಾಡಬೇಕಾಗಿದೆ. ಪ್ರವೇಶ ನೀತಿ ಏನಿದೆ, ಇದು ಖಾಸಗಿಯವರು they should not dictate terms. ನಾವು 20 ಪರ್ಸೆಂಟ್ ಕೊಡುತ್ತೇವೆ, 15 ಪರ್ಸೆಂಟ್ ಕೊಡುತ್ತೇವೆ, ನೀವು ಬೇಕಾದರೆ ತೆಗೆದುಕೊಳ್ಳಿ, ನಮಗೆ ಬಹಳ ಖರ್ಚಾಗಿ ಹೋಗಿದೆ. ನನಗೆ ಈ ಖರ್ಚಿನದೂ ಕೂಡ ಅರ್ಥವಾಗುತ್ತಿಲ್ಲ. ತುಂಬಾ ಖರ್ಚಾಗುತ್ತದೆ. ನಾವು ನಡೆಸುವುದಕ್ಕೇ ಆಗುವುದಿಲ್ಲ ಎನ್ನುತ್ತಾರೆ. ಅದೆಷ್ಟು ಮೆಡಿಕಲ್ ಕಾಲೇಜುಗಳಿಗೆ ಅಪ್ಲಿಕೇಷನ್‌ಗಳು ಬರುತ್ತವೆ. ಅವೆರಡನ್ನೂ ಕೂಡ ಹೇಗೆ ರಿಲೇಟ್ ಮಾಡುವುದು ಎಂಬುದು ನನಗೆ ಗೊತ್ತಾಗುತ್ತಿಲ್ಲ. ನಿಜವಾಗಿಯೂ ಕೂಡ ನಷ್ಟದಲ್ಲಿ ನಡೆಯುತ್ತಿದ್ದರೆ ಇಷ್ಟು ಕಾಲೇಜುಗಳಿಗೆ ಅಪ್ಲಿಕೇಷನ್ ಹೇಗೆ ಬರುತ್ತವೆ? So, running a professional college, is a profitable thing. ಈ ಹಿನ್ನೆಲೆಯಲ್ಲಿ ಶುಲ್ಕವನ್ನು ದಯವಿಟ್ಟು ಯಾವುದೇ ಕಾರಣಕ್ಕೆ ಹೆಚ್ಚಳ ಮಾಡುವುದಕ್ಕೆ ಸರ್ಕಾರದವರು ಒಪ್ಪಿಕೊಳ್ಳಬೇಡಿ. ಅವರನ್ನೇನೋ ಸಮಾಧಾನ ಮಾಡುವುದಕ್ಕೆ ಆಯಿತು. 2 ಲಕ್ಷ ಅಥವಾ 3 ಲಕ್ಷ ಫೀಸ್ ಜಾಸ್ತಿ ಮಾಡಿಕೊಳ್ಳಿ ಅಂದರೆ, ನಿಜವಾಗಿಯೂ ಕೂಡ ವಿದ್ಯಾರ್ಥಿಗಳು ಸೇರುವುದಕ್ಕಾಗುವುದಿಲ್ಲ. ಜೊತೆಗೆ ಈಗಾಗಲೇ ಯಾರು ವಿದ್ಯಾರ್ಥಿಗಳು ಓದುತ್ತಿದ್ದಾರೋ, ಅವರು ಇನ್ನು ಕಂಟಿನ್ಯೂ ಮಾಡುವುದಕ್ಕಾಗುವುದಿಲ್ಲ. They will just come out of the colleges. ಒಬ್ಬ ಆಟೋರಿಕ್ಷಾ ಡ್ರೈವರ್ ಮಗ, ಅಕಸ್ಮಾತ್ ಅವರನ್ನು ಮೆರಿಟ್‌ನಲ್ಲಿ ಬಂದು ಈ ಕಾಲೇಜಿಗೆ ಸೇರಬೇಕೆಂದರೆ, ಯಾವ ಬ್ಯಾಂಕ್‌ನಲ್ಲಿ ಸ್ವಾಮಿ ಅವನಿಗೆ ಲೋನ್ ಕೊಡುತ್ತಾರೆ? ಎಜುಕೇಷನ್ ಲೋನ್ ಕೊಡುತ್ತೇವೆ ಎಂಬ ಬ್ಯಾಂಕ್‌ಗಳ advertisement ಬಹಳ ಚೆನ್ನಾಗಿದೆ. ಅಲ್ಲಿಗೆ ಹೋದಾಗ ನಮಗೆ ಗೊತ್ತಾಗುತ್ತದೆ, ಎಜುಕೇಷನ್ ಲೋನೂ ಇಲ್ಲ, ಮಣ್ಣೂ ಇಲ್ಲ. ಅವರು ಸೆಕ್ಯೂರಿಟಿಗಳನ್ನು ಕೇಳುತ್ತಿದ್ದಾರೆ. ಯಾರೂ ಕೂಡ ಲೋನ್ ಕೊಡುವುದಿಲ್ಲ. ಅದಕ್ಕೋಸ್ಕರ ಶುಲ್ಕದ ಹೆಚ್ಚಳಕ್ಕೆ ದಯವಿಟ್ಟು ನೀವು ಒಪ್ಪಿಗೆ ಕೊಡಬೇಡಿ, ಶರಣಾಗಬೇಡಿ, ಇವತ್ತೇನಿದೆ, ಹಾಲಿ 85 ಗೌರ್ನಮೆಂಟ್ ಸೀಟಿದೆ, 15 ಮ್ಯಾನೇಜ್‌ಮೆಂಟ್ ಕೋಟಾ ಇದೆ, both engineering and medical ನಲ್ಲಿ ಅದನ್ನು ನಾವು ಕಂಟಿನ್ಯೂ ಮಾಡುತ್ತೇವೆ ಎಂದು ಹೇಳಿ. ಅವರು ಮಾಡುವುದಿಲ್ಲ ಎಂದು ಹೋದಾಗ, ನಿಮ್ಮ ಹತ್ತಿರ ಅವರ ಜುಟ್ಟು ಇದೆ. ಯಾವ ರೀತಿ ಅದನ್ನು ಅವರಿಗೆ ಬಗ್ಗಿಸಬೇಕೋ ಅದು ನಿಮಗೆ ಚೆನ್ನಾಗಿ

ಗೊತ್ತಿದೆ. ನನಗೆ ಇನ್ನೊಂದು ಅರ್ಥವಾಗದಿರುವುದು, ಸರ್ಕಾರ ನೋಡಿದರೆ ಬಹಳಷ್ಟು ವೀಕ್ ಎಂದು ಅನ್ನಿಸುತ್ತದೆ. ಆದರೆ ಸರ್ಕಾರದಲ್ಲಿ ಇರುವವರನ್ನು ನೋಡಿದರೆ ಬಹಳ ಸ್ಟ್ರಾಂಗ್ ಎಂದು ಅನಿಸುತ್ತದೆ. Some of our friends on the treasury benches, they are very strong, ಅದೇ ಸರ್ಕಾರದಲ್ಲಿ, ಆ ಸ್ಟ್ರೆಂತ್ ರಿಫ್ಲೆಕ್ಟ್ ಆಗುತ್ತಿಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಫಿಸಿಕಲಿ ಸ್ಟ್ರಾಂಗೋ, ಮೆಂಟಲಿ ಸ್ಟ್ರಾಂಗೋ?

ಶ್ರೀ ಎಸ್. ಸುರೇಶ್‌ಕುಮಾರ್:- ಫಿಸಿಕಲಿ, ಮೆಂಟಲಿ, ಫೈನಾನ್ಷಿಯಲಿ every thing ಜೊತೆಗೆ ಇವತ್ತೇನು aided professional colleges ಇವೆ, ಅಲ್ಲಿ ಮತ್ತು ಗೌರ್ನಮೆಂಟ್ ಕಾಲೇಜಸ್‌ನಲ್ಲಿ ದಯವಿಟ್ಟು ಸೀಟ್ ಸ್ಟ್ರೆಂಗ್ತ್ ಅನ್ನು ಜಾಸ್ತಿ ಮಾಡಿ. Let us increase the strength of the seats. ಅದನ್ನು ನಾವು ಮಾಡಿಕೊಳ್ಳೋಣ. ಪರ್ಮಿಷನ್ ತೆಗೆದುಕೊಳ್ಳುವುದಕ್ಕೆ 100 bed hopital ಇದೆ ಎಂದು ತೋರಿಸಬೇಕು, ಎಷ್ಟು ಕಾಲೇಜಿನಲ್ಲಿ ಇವತ್ತು 100 bed hospital ಇದೆ? ಜನ ನಮ್ಮ ಸರ್ಕಾರಿ ಆಸ್ಪತ್ರೆಗಳನ್ನು ಉಪಯೋಗಿಸಿಕೊಂಡು ಸರ್ಕಾರಕ್ಕೆ ಏನು ಕೊಡುತ್ತಿದ್ದಾರೆ? ಇದೆಲ್ಲಾ ಗೊತ್ತಿರುವಂತಹ ವಿಚಾರವೇ ಆಗಿದೆ. ಆಮೇಲೆ, ಈ ಅನುದಾನಿತ ಕಾಲೇಜುಗಳಲ್ಲಿ, I think there are about 44, ಕೋರ್ಸಸ್ಸೋ, ಸಬ್ಜೆಕ್ಟೋ ಗೊತ್ತಿಲ್ಲ, ಅನುದಾನಹಿತ ಇದೆ. ಅದನ್ನೂ ಕೂಡ ಏಡೆಡ್ ಮಾಡೋಣ. ಇವಗೇನು ಅರ್ಧ ಮಾಡಿದ್ದೇವೋ ಇನ್ನಷ್ಟು ಏಡೆಡ್ ಮಾಡೋಣ. ಒಟ್ಟಿನಲ್ಲಿ ರಾಜ್ಯ ಸರ್ಕಾರ ಈ ಸುಪ್ರೀಂ ಕೋರ್ಟ್‌ನ ಒಂದು ಗೊಂದಲದ ಮೂಟೆ ಏನಿದೆ, ನೀವು ಬಹಳ ಚೆನ್ನಾಗಿ ಹೇಳಿದಿರಿ contradictions, ಗೊಂದಲದ ಮೂಟೆ ಅದು. ಅದಕ್ಕೆ ದಯವಿಟ್ಟು ನೀವು ಶರಣಾಗಿ, ಅದರ ನಂತರ ಈ ಖಾಸಗಿ ಮೆಡಿಕಲ್ ಕಾಲೇಜ್, ಖಾಸಗಿ ಇಂಜಿನಿಯರಿಂಗ್ ಕಾಲೇಜ್ ಲಾಬಿಗೆ ಶರಣಾಗಬೇಡಿ ಎಂದು ನಾನು ಮತ್ತೆ ಮತ್ತೆ ಹೇಳುತ್ತೇನೆ. Let us not sacrifice the interest of our State. ಆ ಹುಡುಗರು ಮಾತ್ರವಲ್ಲ, ಆ ಹುಡುಗರ ಮನೆಯವರು, ಮುಂದೆ ಬರುವ ನಮ್ಮ ಸಮುದಾಯ ಅವರಿಗೆ ಟ್ರೀಟ್‌ಮೆಂಟ್ ಕೊಡುವವರ್ಯಾರು? ಇದನ್ನೆಲ್ಲಾ ನೋಡಿ ದಯವಿಟ್ಟು ನೀವು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಆಶಿಸುತ್ತಾ, ಇಲ್ಲಿಯವರೆಗೆ ಸದನದಲ್ಲಿ ಬರಲಿಕ್ಕೆ ಬಿಡಲೇ ಬಾರದಾಗಿತ್ತು. ಅಕ್ಟೋಬರ್ 31ನೇ ತಾರೀಖು ಆ ಕೆಲಸ ನೀವು ಮಾಡಿ ಬಿಟ್ಟಿದ್ದರೆ, ನಾವು ಶಹಬಾಷ್ ಎನ್ನುತ್ತಿದ್ದೆವು. ಇವತ್ತು ಶಹಭಾಷ್ ಎನ್ನುವ ಸ್ಥಿತಿಯಲ್ಲಿ ನಾವು ಇಲ್ಲ. ಇದೇನಾದರೂ ಮಾಡಿ ನಮ್ಮ ಹತ್ತಿರ ಶಭಾಷ್‌ಗಿರಿ ತೆಗೆದುಕೊಳ್ಳುತ್ತೀರಿ ಎಂಬುದನ್ನು ನಾವು ನೋಡೋಣ. ಇಷ್ಟು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಭೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೇ, ಸ್ನೇಹಿತರಾದಂತಹ ಸುರೇಶ್‌ಕುಮಾರ್‌ರವರು ಬಹಳ ಆಳವಾಗಿ ಅಭ್ಯಾಸ ಮಾಡಿ ಅದರಲ್ಲಿ ಇರತಕ್ಕಂಥ ಲೋಪಗಳು contradictions, ಮತ್ತು ಇತರ ವಿಷಯಗಳೆಲ್ಲವನ್ನೂ ಕೂಡ ಬಹಳ ವಿವರವಾಗಿ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಸಹ ಮಧ್ಯೆ ಮಧ್ಯೆ ಪ್ರವೇಶ ಮಾಡಿದ್ದಾರೆ. ನಾನು ಇದನ್ನು ಅಷ್ಟು ಆಳವಾಗಿಯೂ ಕೂಡ ಅಭ್ಯಾಸ ಮಾಡಿಲ್ಲ, ಆಳವಾಗಿ ಹೋಗುವುದಕ್ಕೂ ಕೂಡ ನನಗೆ ಇಷ್ಟ ಇಲ್ಲ. ಕಾರಣವೇನೆಂದರೆ, ಇವತ್ತು ಮಾತೆತ್ತಿದ್ದರೆ ಈ ದೇಶದಲ್ಲಿ ಎಲ್ಲಾ ಕಡೆಯೂ ಕೂಡ ಪ್ರತಿಭೆಗೆ ಬೆಲೆ ಇರಬೇಕು ಎಂದು ಹೇಳುತ್ತಾರೆ. ಪ್ರತಿಭೆಗೆ ಪ್ರಥಮ ಆದ್ಯತೆ ಕೊಡಲೇಬೇಕು. ನಾನು ಅದರಲ್ಲಿ ರಾಜಿ ಮಾಡಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಆದರೆ ಇವತ್ತು ಪ್ರತಿಭೆಯೂ ಕೂಡ ಯಾವ ರೀತಿ

ಉತ್ಪತ್ತಿಯಾಗುತ್ತಿದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಸ್ವಾಮಿ, ಇವತ್ತು ಗ್ರಾಮೀಣ ಪ್ರದೇಶದಲ್ಲಿ ಶೇಕಡ 70ರಷ್ಟು ಜನ ವಾಸ ಮಾಡುತ್ತಿದ್ದಾರೆ. ಅಲ್ಲಿ ನಾವು ಯಾವ ರೀತಿಯಾಗಿ ಶಾಲೆಗಳನ್ನು ನಡೆಸುತ್ತಿದ್ದೇವೆ? ಅಲ್ಲಿ ಯಾವ ರೀತಿಯಾದಂತಹ ಗುಣಮಟ್ಟದ ವಿದ್ಯಾಭ್ಯಾಸವನ್ನು ನಾವು ಕೊಡುತ್ತಿದ್ದೇವೆ? ಇದರ ಬಗ್ಗೆ ನಾವ್ಯಾರೂ ಕೂಡ ಹೆಚ್ಚಿಗೆ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುತ್ತಿಲ್ಲ ನನ್ನದೇ ಆದಂತಹ ಒಂದು ಉದಾಹರಣೆಯನ್ನು ಕೊಡುತ್ತೇನೆ. ನಾನೊಂದು ಗ್ರಾಮೀಣ ಶಾಲೆಗೆ ಹೋಗಿದ್ದೆ. ನಾನು ಹೋಗುವುದಕ್ಕೆ ಮೊದಲು ಅಲ್ಲಿನ ಊರಿನವರು ನನ್ನ ಬಳಿಗೆ ಬಂದು ನಮಗೆ ಇನ್ನೊಬ್ಬರು ಉಪಾಧ್ಯಾಯರು ಬೇಕು ಎಂದು ಕೇಳಿದ್ದರು. ನಾನು ಹೇಳಿದೆ, 'ನಿಮ್ಮೂರು ಸಣ್ಣ ಊರಪ್ಪ ಇಲ್ಲಿ ಇನ್ನೊಬ್ಬ ಉಪಾಧ್ಯಾಯರ ಅವಶ್ಯಕತೆ ಇಲ್ಲ, ಪ್ರಾಥಮಿಕ ಶಾಲೆಗಳಲ್ಲಿ 40 ರಿಂದ 50 ಜನ ಮಕ್ಕಳು ಇದ್ದರೆ ಅವರಿಗೆ ಒಬ್ಬರೇ ಉಪಾಧ್ಯಾಯರು ಎನ್ನತಕ್ಕಂಥ ನಿಯಮ ಇದೆ, ಆದ್ದರಿಂದ ಇನ್ನೊಬ್ಬ ಹೆಚ್ಚುವರಿಯಾಗಿರತಕ್ಕಂಥ ಉಪಾಧ್ಯಾಯರನ್ನು ಇಲ್ಲಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಊರಿನಲ್ಲಿ ಅಷ್ಟು ಮಕ್ಕಳು ಇಲ್ಲ, ಬಹಳ ಜಾಸ್ತಿ ಅಂತ ಇದ್ದರೆ ನಿಮ್ಮ ಊರಿನಲ್ಲಿ 30 ಜನ ಹುಡುಗರು ಇರಬಹುದು' ಎಂದು ನಾನು ಅವರಿಗೆ ಹೇಳಿದೆ. ಇಲ್ಲಾ, 50 ಜನ ಇದ್ದಾರೆ, ಆದ್ದರಿಂದ ಹೆಚ್ಚಿಗೆ ಉಪಾಧ್ಯಾಯರು ಬೇಕು ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಆಮೇಲೆ ನಾನು ಶಾಲೆಗೆ ಹೋದೆ. ನಾನು ಶಾಲೆಗೆ ಹೋಗಿ ಅಲ್ಲಿ ತಲೆ ಎಣಿಸಿದರೆ, ಅಲ್ಲಿ ಇದ್ದದ್ದು 27 ಜನ ಮಕ್ಕಳು ಮಾತ್ರ. ಅದು ಒಂದು ಕಡೆಗೆ ಇರಲಿ. ಅಲ್ಲಿ ನಾಲ್ಕನೇ ತರಗತಿಯಲ್ಲಿ ಅದು ಪ್ರಾಥಮಿಕ ಶಾಲೆ ಆಗಿರುವ ಕಾರಣದಿಂದ, ನಾಲ್ಕನೇ ತರಗತಿಯಲ್ಲಿ ಇರತಕ್ಕಂಥ ಒಬ್ಬ ವಿದ್ಯಾರ್ಥಿಯನ್ನು ಕರೆದು, ನಿನ್ನ ಹೆಸರೇನು ಎಂದು ಕೇಳಿದೆ. ಅವನ ತನ್ನ ಹೆಸರು ಹೇಳಿದ. ನಿನ್ನ ಹೆಸರನ್ನು ಬರೆ ಎಂದು ಹೇಳಿದೆ, ಅವನು ತನ್ನ ಹೆಸರನ್ನು ಬರೆದ. ನೋಡಪ್ಪ, ನನ್ನ ಹೆಸರು ಭೈರೇಗೌಡ, ಅದನ್ನು ಬರೆ ನೋಡೋಣ ಎಂದು ನಾನು ಹೇಳಿದೆ. ಅವನು ಬರೆದ ಅದನ್ನು ಓದಿದ ಮೇಲೆ, ಅವನು ಬರೆದಿದ್ದು ಏನು ಎಂದರೆ, ಭೈರೇಗೌಡ ಎಂದು ಅಲ್ಲಿ ಇರಲಿಲ್ಲ. ನನ್ನ ಹೆಸರನ್ನು ಆತ 'ಬರೇಗಡ' ಎಂದು ಅಲ್ಲಿ ಬರೆದಿದ್ದ, ಸ್ವಾಮಿ, ಈ 'ಬರೇಗಡ' ಎಂದು ಬರೆದಿರತಕ್ಕಂಥವನನ್ನು ಪ್ರತಿಷ್ಠಿತ ಶಾಲೆಗಳಲ್ಲಿ ಓದಿರತಕ್ಕ ಮಕ್ಕಳೊಂದಿಗೆ ಹೋಲಿಸಿದರೆ ಬೇರೆ? ವಿಧಾನ ಸೌಧದ ಪಕ್ಕದಲ್ಲಿ ಕೆಲವು ಪ್ರತಿಷ್ಠಿತ ಶಾಲೆಗಳಿವೆ, ಆ ಶಾಲೆಯ ಮಕ್ಕಳಿಗೆ ಅವರು ತಾಯಿಯ ಹೊಟ್ಟೆಯಲ್ಲಿ ಇರುವಂತಹ ಪರಿಸ್ಥಿತಿಯಲ್ಲೇ ಅವರಿಗೆ ಯಾವ ರೀತಿಯಾದಂತಹ ವಿದ್ಯಾಭ್ಯಾಸ ಕೊಡಬೇಕು, ಏನು ಮಾಡಬೇಕು ಅನ್ನತಕ್ಕಂಥದ್ದು ಎಲ್ಲವೂ ಕೂಡ ತಾಯಿಯ ಹೊಟ್ಟೆಯಲ್ಲಿ ಇದ್ದಾಗಲೇ ನಿರ್ಣಯವಾಗಿರುತ್ತದೆ. ಹೊರಗಡೆ ಬಂದ ಮೇಲೆ ಇನ್ನೆಷ್ಟು ಇರುತ್ತದೆ ಎಂಬುದನ್ನು ತಾವೇ ಊಹೆ ಮಾಡಿ ತಾಯಿಯ ಹೊಟ್ಟೆಯಲ್ಲಿ ಇರುವಾಗಲೇ ಅವರ ಸೀಟು ರಿಸರ್ವೇಷನ್‌ನಲ್ಲಿ ಆಗಿರುತ್ತದೆ.

5.20 ಪಿ.ಎಂ.

ಕೆಲವು ಕಡೆ ಇರತಕ್ಕಂತಹ ಎಲ್‌ಕೆಜಿ, ಯುಕೆಜಿ ಶಾಲೆಗಳಿಗೆ ಸೇರಿಸಬೇಕಾದರೆ ಎರಡರಿಂದ ಎರಡುವರೆ ಲಕ್ಷ ರೂಪಾಯಿ ಡೊನೇಷನ್ ಕೊಡುವ ಶಾಲೆಗಳು ಬೆಂಗಳೂರಿನಲ್ಲಿ ಇವೆ. ಅಂತಹ ಪ್ರತಿಷ್ಟಿತ ಶಾಲೆಗಳು ಅಷ್ಟು ಸುಸಜ್ಜಿತವಾಗಿರತಕ್ಕಂತಹ ಶಾಲೆಗಳು ಇವೆಲ್ಲಾ ಇವೆ. ಹಳ್ಳಿಯಲ್ಲಿ ಕಿಟಕಿ ಇದ್ದರೆ ಬಾಗಿಲು ಇರುವುದಿಲ್ಲ, ಬಾಗಿಲು ಇದ್ದರೆ ಕೂತುಕೊಳ್ಳುವುದಕ್ಕೆ ನೆಲ ಸರಿ ಇರುವುದಿಲ್ಲ. ನೆಲ ಸರಿಯಾಗಿದ್ದರೆ ಮಣೆ ಇರುವುದಿಲ್ಲ. ಮಣೆ ಇದ್ದರೆ ಬೆಂಚು ಇರುವುದಿಲ್ಲ.

ನನ್ನ ಕ್ಷೇತ್ರದಲ್ಲಿ ನಡೆದಿರತಕ್ಕಂತಹ ಘಟನೆ ಗಮನಿಸಿ ಅನೇಕ ಶಾಲೆಗಳಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ, ಶಾಲೆಗೆ ಹೋದ ಮಕ್ಕಳು ಸುರಕ್ಷಿತವಾಗಿ ವಾಪಸ್ ಬರುತ್ತಾರೆಂಬುದೂ ಕೂಡ ಖಾತರಿ ಇಲ್ಲ. ನನ್ನ ಕ್ಷೇತ್ರದಲ್ಲಿ ಒಂದು ಶಾಲೆಗೆ ಹೋದ ಮಗು ಸ್ಕೂಲ್ ಒಳಗಡೆ ಗೋಲಿ ಆಡುತ್ತಿತ್ತು. ಆ ಗೋಲಿ ಹೋಗಿ ಎರಡು ಚಪ್ಪಡಿ ಮಧ್ಯದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತದೆ. ಅಲ್ಲಿ ಕೈ ಇಟ್ಟು ಗೋಲಿ ಎತ್ತಿಕೊಳ್ಳುವುದಕ್ಕೆ ಹೋದ ಅಲ್ಲಿ ನಾಗರಹಾವು ಕಡಿದು ಆ ಹುಡುಗ ಸತ್ತ ಆ ಪರಿಸ್ಥಿತಿ ಇರತಕ್ಕಂತಹ ಶಾಲೆಯನ್ನು ನಾವು ನೋಡುತ್ತಿದ್ದೇವೆ. ಆ ರೀತಿಯಾಗಿ ಪರಿಸರ ವಾತಾವರಣವನ್ನು ನಾವು ಇನ್ನು ಉತ್ತಮಪಡಿಸುವುದಕ್ಕೆ ನಾನಾ ಕಾರಣಗಳಿಂದ ನಮ್ಮ ಕೈಯಲ್ಲಿ ಆಗುತ್ತಿಲ್ಲ. ಇಂತಹ ಶಾಲೆಗಳಲ್ಲಿ ಓದಿರತಕ್ಕಂತಹ ಮಕ್ಕಳಿಗೆ 'ಬೈರೇಗೌಡ' ಎನ್ನುವುದು ಬರೆಗಡ ಎಂದು ಬರೆಯುವ ಮಕ್ಕಳಿಗೆ ನನ್ನ ಹೆಸರೂ ಕೂಡ ಬರೆಯುವುದಕ್ಕೆ ಸಾಧ್ಯ ಇಲ್ಲದೆ ಇರತಕ್ಕಂತಹ ವಿದ್ಯಾರ್ಥಿಗಳನ್ನು ಇಲ್ಲಿ ಸೋಫಿಯಾ ಸ್ಕೂಲ್‌ನಲ್ಲಿ ಓದಿದಂತಹ ಮಕ್ಕಳನ್ನು ಅಥವಾ ಬೇರೆ ಬೇರೆ ಇಂಥದ್ದೇ ಶಾಲೆಗಳಲ್ಲಿ ಇರತಕ್ಕಂತಹ ಮಕ್ಕಳ ಜೊತೆಗೆ ಸೇರಿಸಿ ಇಬ್ಬರನ್ನು ಕತ್ತೆ ಕುದುರೆ ಎರಡನ್ನೂ ಕೂಡ ಒಟ್ಟಿಗೆ ಸೇರಿ ನಾವು ರೇಸ್‌ಗೆ ಬಿಟ್ಟರೆ ಯಾರು ಗೆಲ್ಲುತ್ತಾರೆ? ಈ ಮಾತು ಎತ್ತಿದರೆ ಪ್ರತಿಭೆ ಎಂದು ಹೇಳುತ್ತೀರಿ? ಆ ಪ್ರತಿಭೆಯನ್ನು ರೂಪಿಸತಕ್ಕಂತಹ ವಾತಾವರಣ ಅಲ್ಲಿ ನಿರ್ಮಾಣವಾಗಿದೆಯಾ? ಖಂಡಿತ ನಿರ್ಮಾಣವಾಗಿಲ್ಲ. ಉಪಾಧ್ಯಾಯರು ಶಾಲೆಗಳಿಗೆ ಬಂದರೆ ಉಂಟು ಇಲ್ಲವಾದರೆ ಇಲ್ಲ. ಇನ್ನೊಂದು ಘಟನೆ ಹೇಳುತ್ತೇನೆ. ಮಾರ್ಚ್ ತಿಂಗಳಲ್ಲಿ ಕೆಲವು ವರ್ಷಗಳ ಹಿಂದೆ ಒಬ್ಬ ಉಪಾಧ್ಯಾಯರು ಬಂದರು, ನನ್ನ ಹತ್ತಿರ ಒಂದು ಏನು ಹೇಳಿದರು ಎಂದರೆ, ನೋಡಿ ನನಗೆ ಟ್ರಾನ್ಸ್‌ಫರ್ ಮಾಡಿದ್ದಾರೆಂದು ಹೇಳಿದರು. ವರ್ಗಾವರ್ಗಿ ವಿಚಾರ ನನಗೆ ಆಗುವುದಿಲ್ಲ. ವರ್ಗ ಆಗಿದ್ದರೆ ಅಲ್ಲಿಗೆ ಹೋಗಿರ್ರಿ ಎಂದು ನಾನು ಮೂಲಾಜಿಲ್ಲದೆ ಉಪಾಧ್ಯಾಯರಿಗೆ ಹೇಳಿದೆ. ನನ್ನ ಮಾತನ್ನು ಸ್ವಲ್ಪ ಕೇಳಿ ಎಂದು ಹೇಳಿದರು. ಸ್ವಾಮಿ ವರ್ಷ ಪೂರ್ತಿ ಆ ಶಾಲೆ ನಡೆದಿಲ್ಲ. ಈಗ ನನ್ನನ್ನು ಅಲ್ಲಿಗೆ ಹೋಗಿ ಪರೀಕ್ಷೆ ಮಾಡಿ ಎಂದು ಆ ಪ್ರಾಥಮಿಕ ಶಾಲೆಗೆ ವರ್ಗ ಮಾಡಿದ್ದಾರೆ. ನೀವೇ ಹೇಳಿ, ಯಾವ ರೀತಿ ಏನನ್ನು ನಾನು ಪರೀಕ್ಷೆ ಮಾಡಬೇಕು? ಆ ಶಾಲೆಯಲ್ಲಿ ಹೋಗಿ ಏನು ಮಾಡಬೇಕೆಂದು ನನಗೆ ಪ್ರಶ್ನೆ ಕೇಳಿದರು. ನಾನು ಇದರ ಉತ್ತರ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಅದು ಇವತ್ತು ನಮ್ಮ ವಾಸ್ತವಾಂಶ. ಇವರನ್ನು ಏನು ಮಾಡುತ್ತಿದಾದರೆ? ವರ್ಷ ಪೂರ್ತಿಯಾಗಿ ಶಾಲೆ ನಡೆಯದೆ ಇರತಕ್ಕಂತಹ ಮಕ್ಕಳನ್ನು ಪರೀಕ್ಷೆ ಮಾಡುವುದಕ್ಕೆ ಉಪಾಧ್ಯಾಯರನ್ನು ನೇಮಿಸತಕ್ಕಂತಹ ವಾತಾವರಣ ನಮ್ಮಲ್ಲಿ ಇದೆ. ನಾವು ಇದನ್ನು ನೇರವಾಗಿ ನಿಮಗೆ ಅಥವಾ ಸರ್ಕಾರಕ್ಕೆ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಾವೆಲ್ಲರೂ ಇದಕ್ಕೆ ಕಾರಣಕರ್ತರಾಗಿದ್ದೇವೆ. ಅಲ್ಲಿರತಕ್ಕಂತಹ ವಾತಾವರಣವನ್ನು ನಿರ್ಮಿಸುವುದರಲ್ಲಿ ನಾವು ಸಂಪೂರ್ಣವಾಗಿ ವೈಫಲ್ಯತೆಯನ್ನು ನಾವು ನೋಡಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಓದಿದ ಮಕ್ಕಳಿಗೆ ಇಂತಹ ಪರಿಸರ ಹಾಗೂ ಬೆಂಗಳೂರಿನ ಪ್ರತಿಷ್ಠಿತ ಶಾಲೆಗಳಲ್ಲಿ ಓದಿದಂತಹ ಮಕ್ಕಳಿಗೆ ಸಿಇಟಿ ಮಾಡುತ್ತೀರಿ, ಮತ್ತೊಂದು ಮಾಡಬೇಕೆಂದು ಅವರೆಲ್ಲರನ್ನು ಜೊತೆಗೆ ಹಾಕಿ ಕತ್ತೆ ಕುದುರೆ, ಮಾಡಿ ರನ್ನಿಂಗ್ ರೇಸ್ ಬಿಡುತ್ತೀರಿ ಎಂದರೆ, ಕತ್ತೆ ಗೆಲ್ಲುತ್ತದೆಯೋ ಕುದುರೆ ಗೆಲ್ಲುತ್ತದೆಯೋ ಇವತ್ತು ಗೆಲ್ಲುತ್ತಿರುವುದು ಕುದುರೆಗಳೂ. ಕತ್ತೆಗಳು ಇನ್ನು ಹಳ್ಳಿಗಳಲ್ಲಿ ಇವೆ. ಕುದುರೆ ಜೊತೆಗೆ ಅದಕ್ಕೆ ಶಕ್ತಿ ಕೊಡತಕ್ಕಂತಹ ಬಲ ತುಂಬತಕ್ಕಂತಹ ಕೆಲಸ ಇವತ್ತು ಆಗಲಿಲ್ಲ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ:- ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಮೇಲೆ ಮಾತನಾಡಿ.

ಶ್ರೀ ಸಿ. ಬೈರೇಗೌಡ:- ನಾನು ವಕೀಲ ಅಲ್ಲ, ಇಂತಹ ವಕೀಲ ಹತ್ತಿರ ನಾನು ಪಾಠ ಕೂಡ ಕಲಿಯಬೇಕಾಗಿಲ್ಲ. ಈ ವಾತಾವರಣವನ್ನು ನಿರ್ಮಾಣ ಮಾಡದೆ ನಾನು ಈ ಸಂದರ್ಭದಲ್ಲಿ ನಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಶಾಲೆಯಲ್ಲಿ ಹಳ್ಳಿಗಳ ಶಾಲೆಗಳಲ್ಲಿ ಓದಿರತಕ್ಕಂತಹ ಮಕ್ಕಳು ನಿಮ್ಮ ಸೀಟಿಯಲ್ಲಿ ಈ ಪ್ರೊಫೆಷನಲ್ ಕೋರ್ಸ್‌ಸ್, ಮೆಡಿಕಲ್ ಕಾಲೇಜ್, ಇಂಜಿನಿಯರಿಂಗ್ ಕಾಲೇಜ್ ಇನ್ನುಳಿದಿರತಕ್ಕಂತಹ ಕಾಲೇಜುಗಳಲ್ಲಿ ಎಷ್ಟು ಪರ್ಸೆಂಟೇಜ್‌ಗೆ ಅಲ್ಲಿ ಅಡ್ಮಿಷನ್ ಸಿಗುತ್ತಿದೆ, ಇಂಜಿನಿಯರ್‌ರಿಂಗ್ ಇರಬಹುದು, ಮೆಡಿಕಲ್ ಕಾಲೇಜ್ ಇರಬಹುದು, ರೋಸ್ಟರ್ ಇರಬಹುದು, ರೋಸ್ಟರ್ ಪ್ರಕಾರ ಮಾಡಿ. ರೋಸ್ಟರ್ ಬಿಟ್ಟು ಬಿಡಿ ಎಂದು ನಾನು ಹೇಳುತ್ತಿಲ್ಲ. ಅವರು ಯಾವುದೇ ವರ್ಗಕ್ಕೆ ಸೇರಿದವರಾಗಲಿ, ಯಾವುದೇ ಜಾತಿಗೆ ಸೇರಿದ ಮಕ್ಕಳಾಗಲಿ ಒಂದರಿಂದ 10ನೇ ತರಗತಿಯವರೆಗೆ ಓದಿರತಕ್ಕಂತಹ ಮಕ್ಕಳಿಗೆ ಎಷ್ಟರಮಟ್ಟಿಗೆ ಈ ಪ್ರವೇಶ ಅವಕಾಶ ಸೀಟಿ ಮೂಲಕ, ಬೇರೆಯವರ ಮೂಲಕ ದೊರೆಯುತ್ತಿದೆ ಎಂದು ಈ ಅಂಕಿ ಅಂಶಗಳನ್ನು ದಯವಿಟ್ಟು ಕೊಡಬೇಕು. ಉತ್ತರ ಈಗಲೇ ಕೊಡುವುದಕ್ಕೆ ಸಾಧ್ಯವಿರದೆ, ಇದ್ದರೆ ಸಮಯ ತೆಗೆದುಕೊಂಡಾದರೂ ಪರವಾಗಿಲ್ಲ ಕೆಲವು ದಿನಗಳ ನಂತರವಾದರೂ ಮುಖ್ಯವಾಗಿರತಕ್ಕಂತಹ ಪ್ರಶ್ನೆಗೆ ತಾವು ದಯವಿಟ್ಟು ಉತ್ತರ ಕೊಡಬೇಕು. 53-54 ವರ್ಷವಾಯಿತು ನಮಗೆ ಸ್ವಾತಂತ್ರ್ಯ ಬಂದು. ಈಗಲೂ ಕೂಡ ಹಳ್ಳಿ ಕೊಂಪೆಗಳಲ್ಲಿ ಇರತಕ್ಕಂತಹ ಮಕ್ಕಳಿಗೆ ಅಲ್ಲಿ ಇಟ್ಟು ಕತ್ತೆಗಳನ್ನು ಕತ್ತೆಗಳಂತೆ ಅಲ್ಲಿ ಹಳ್ಳಿಗಳಲ್ಲಿ ಉಳಿಸಿ ನಾವು ಸೌಧಗಳನ್ನು, ಮಹಾ ಸೌಧಗಳನ್ನು ನಿರ್ಮಿಸುತ್ತೇವೆಂದರೆ ಅಂತಹ ಸೌಧಗಳ ಅಡಿಪಾಯ ಸರಿ ಇರುವುದಿಲ್ಲ. ಭದ್ರ ಇರುವುದಿಲ್ಲ. ಭದ್ರವಾಗಿರತಕ್ಕಂತಹ ಸೌಧ ಕಟ್ಟಬೇಕಾಗಿದ್ದರೆ ಅದು ನಿಜವಾದ ಅಡಿಪಾಯದ ಮೇಲೆ ಕಟ್ಟಬೇಕಾದ ಅವಶ್ಯಕತೆ ಇದೆ. ಇದಕ್ಕೆಲ್ಲ ತಾವು ದಯವಿಟ್ಟು ಉತ್ತರ ಕೊಡಿ. ಈ ತಾರತಮ್ಯವನ್ನು ಯಾವ ರೀತಿ ಸರಿಪಡಿಸುತ್ತೀರಿ, ಸರಿಪಡಿಸುವುದಕ್ಕೆ ತಾವು ಏನು ಆಲೋಚನೆ ಮಾಡುತ್ತೀರಿ? ಯಾವ ರೀತಿ ಸರಿಪಡಿಸುವುದು ಸೂಕ್ತ ಎನ್ನುವುದನ್ನು ದಯವಿಟ್ಟು ಉತ್ತರ ಕೊಡಬೇಕೆಂದು ಮನವಿ ಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಮಾನ್ಯ ಸಭಾಧ್ಯಕ್ಷರೆ, ಈ ಒಂದು ವೃತ್ತಿಪರ ಶಿಕ್ಷಣ ಪ್ರವೇಶಕ್ಕೆ ನಮ್ಮ ರಾಜ್ಯದಲ್ಲಿ 1993 ರಿಂದ ಒಂದು ಒಳ್ಳೆಯ ವ್ಯವಸ್ಥೆ ನಡೆದುಕೊಂಡು ಬಂದಿದೆ. 1993ರಲ್ಲಿ ಸುಪ್ರಿಂ ಕೋರ್ಟಿನಲ್ಲಿ ಉನ್ನಿ ಕೃಷ್ಣನ್ ಜಡ್ಜ್‌ಮೆಂಟ್ ಪ್ರಕಾರ ನಮ್ಮ ಈ ಪ್ರವೇಶ ಪದ್ಧತಿ ಪ್ರಾರಂಭವಾಯಿತು. ಆ ಉನ್ನಿ ಕೃಷ್ಣನ್ ಕೇಸ್‌ನಲ್ಲಿ ಏನು ಪದ್ಧತಿ ಜಾರಿಗೆ ಬಂದಿತು ಎಂದರೆ, ಏನು 100 ಸೀಟ್ ಇದ್ದರೆ ಅದರಲ್ಲಿ 50 ಭಾಗ ಫ್ರೀ ಸೀಟ್ ಮತ್ತು ಶೇಕಡ 35 ಪೇಮೆಂಟ್ ಸೀಟ್ ಅದರಲ್ಲಿ ಇದು ಶೇಕಡ 15 ಮ್ಯಾನೇಜ್‌ಮೆಂಟ್. ಆ ಪೇಮೆಂಟ್ ಸೀಟ್‌ನಲ್ಲಿ ಕರ್ನಾಟಕದವರಿಗೆ ಮತ್ತು ಕರ್ನಾಟಕ ಹೊರತುಪಡಿಸಿದ ವಿದ್ಯಾರ್ಥಿಗಳು ಹೀಗೆ ಜಾರಿಗೆ ತಂದಿದ್ದೇವೆ. ಬಹಳ ಯಶಸ್ವಿಯಾಗಿ ನಮ್ಮ ರಾಜ್ಯದಲ್ಲಿ ನಡೆದುಕೊಂಡು ಬರುತ್ತಿದೆ. 1997ರಲ್ಲಿ ನಾವು ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಈ ನಿಯಮಾವಳಿಗಳಲ್ಲಿ ಸ್ವಲ್ಪ ಏರುಪೇರು ಮತ್ತು ಕಾನೂನು ತೊಡರು ಇದ್ದುದರಿಂದ ನಾವು ಅದನ್ನು ಸಹ ಸರಿಪಡಿಸಿ ಪಾರದರ್ಶಕವಾದ ರೂಲ್ಸ್ ಮಾಡಿ 1997 ರಲ್ಲಿ ಅಂದರೆ ಸ್ಕೇಲಾ ಕೆಟಗರೀಸ ಏನಿದೆ ಆಂಗ್ಲೋ ಇಂಡಿಯನ್

ಡಿಫೆನ್ಸ್ ಎಕ್ಸ್ ಡಿಫೇನ್ಸ್ ಎನ್‌ಸಿಸಿ, ಸ್ಪೋರ್ಟ್ಸ್, ಫಿಸಿಕಲ್ ಹ್ಯಾಂಡಿಕ್ಯಾಪ್ಟ್ ಈ ರೀತಿ ಸುಮಾರು ಎಂಟು ಕೆಟಗರಿಗಳಲ್ಲಿ ಸರಿಯಾದ ನಿಯಮಾವಳಿಗಳು ಇರಲಿಲ್ಲ. ಇದರಲ್ಲಿ ಸ್ವಲ್ಪ ಗೋಲ್‌ಮಾಲ್ ನಡೆಯುತ್ತಿತ್ತು. ಮತ್ತು ಈ ಸಿಇಟಿ ಪದ್ಧತಿಯಲ್ಲಿ ಸಹ ಕೌನ್ಸಿಲಿಂಗ್ ಪದ್ಧತಿ ಅಷ್ಟೊಂದು ಯಶಸ್ವಿಯಾಗಿ ನಡೆದಿರಲಿಲ್ಲ. ಹೀಗಾಗಿ ಹೈಕೋರ್ಟಿನಲ್ಲಿ ಅನೇಕ ಸಂದರ್ಭಗಳಲ್ಲಿ ಪ್ರವೇಶ ಪ್ರಶ್ನೆ ಮಾಡಿದ್ದು ಸಹ ಉಂಟು 1997 ರಲ್ಲಿ ಈ ಪ್ರತಿಯೊಂದು ಕೆಟಗರಿಗಳಲ್ಲೂ ಸಹ ಪಾರದರ್ಶಕವಾದ ಒಂದು ನಿಯಮಾವಳಿಗಳನ್ನು ತಂದು ನಾವು ಅಲ್ಲಿಗೆ ನಿಲ್ಲಿಸಿದ್ದೇವೆ. ಬಹಳ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ. ಬಹುಶಃ ಇಡೀ ದೇಶದಲ್ಲಿಯೇ ನಮ್ಮ ರಾಜ್ಯದಲ್ಲಿ ಸಿ.ಇ.ಟಿ. ಪದ್ಧತಿ ಚೆನ್ನಾಗಿದ್ದ ಕಾರಣದಿಂದಲೇ ಬೇರೆ ಎಲ್ಲಾ ರಾಜ್ಯಗಳವರು ನಮ್ಮ ರಾಜ್ಯಕ್ಕೆ ಬಂದು ಯಾವ ರೀತಿಯಲ್ಲಿ ಪ್ರವೇಶ ಪ್ರಕ್ರಿಯೆಯನ್ನು ಮಾಡುತ್ತಿದ್ದಾರೆ ಎಂಬುದನ್ನು ನೋಡಿ ಅದರಂತೆ ಆ ರಾಜ್ಯದವರು ಜಾರಿಗೆ ತರತಕ್ಕಂಥ ಪ್ರಯತ್ನವನ್ನು ಮಾಡಿರುವುದೂ ಉಂಟು. ಇಂಥ ಒಂದು ವ್ಯವಸ್ಥೆಯಿಂದಾಗಿ ನಮ್ಮ ರಾಜ್ಯದ ಪ್ರತಿಷ್ಠೆ ಎಷ್ಟು ಹೆಚ್ಚಿತು ಎಂದರೆ ವರ್ಷೇವರ್ಷೇ ನಮ್ಮ ರಾಜ್ಯದಿಂದ ಹಾಗೂ ಬೇರೆ ರಾಜ್ಯಗಳಿಂದ ಬೇಡಿಕೆ ಜಾಸ್ತಿಯಾಗುತ್ತಾ ಬಂತು ಏಕೆಂದರೆ ವ್ಯವಸ್ಥೆಯ ಬಗ್ಗೆ ವಿಶ್ವಾಸಾರ್ಹತೆ ಜಾಸ್ತಿಯಾಯಿತು, ಪಾರದರ್ಶಕತೆಯಿಂದ ಪ್ರವೇಶ ಪದ್ಧತಿ ಜಾರಿಗೆ ಬಂದಿತ್ತು ಇದಲ್ಲದೇ ಅರ್ಹತೆ ಆಧಾರದ ಮೇಲೆ ಎಲ್ಲಾ ವರ್ಗದವರಿಗೆ ಒಳಗೊಂಡಂತೆ ಒಂದು ರೀತಿಯ ಒಳ್ಳೆಯ ಪದ್ಧತಿ ಜಾರಿಯಲ್ಲಿದ್ದುದ್ದರಿಂದ ವರ್ಷೇ ವರ್ಷೇ ಪರೀಕ್ಷೆಗೆ ಕುಳಿತುಕೊಳ್ಳುವವರ ಸಂಖ್ಯೆ ಜಾಸ್ತಿಯಾಗುತ್ತಾ ಬಂತು. ಅದಕ್ಕೆ ಸಂಬಂಧಪಟ್ಟಂತೆ ನಾನು ಉದಾಹರಣೆ ಹೇಳುವುದಾದರೆ 1998ರಲ್ಲಿ ಅರ್ಜಿ ಹಾಕಿದ ವಿದ್ಯಾರ್ಥಿಗಳ ಸಂಖ್ಯೆ 69220. ಅದರಲ್ಲಿ ಕರ್ನಾಟಕದ 40863 ಹಾಗೂ ಕರ್ನಾಟಕೇತರ 29220 ವಿದ್ಯಾರ್ಥಿಗಳು ಇದ್ದರು. ಇವರಲ್ಲಿ 62173 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಂಡಿದ್ದರು. ಹೀಗೆ 1998ರಲ್ಲಿ 68 ಸಾವಿರ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರೆ, 1999 ರಲ್ಲಿ 77185 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು. 2000 ನೇ ವರ್ಷದಲ್ಲಿ ಒಟ್ಟು 100590 ವಿದ್ಯಾರ್ಥಿಗಳು ಅರ್ಜಿ ಹಾಕಿ ಅದರಲ್ಲಿ 89425 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು. 2001 ನೇ ವರ್ಷದಲ್ಲಿ 127000 ವಿದ್ಯಾರ್ಥಿಗಳು ಅರ್ಜಿ ಹಾಕಿ 115825 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಂಡರು 2002 ರಲ್ಲಿ 131000 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಂಡರು. ಅಂದರೆ ಪ್ರತಿ ವರ್ಷ ಬೇಡಿಕೆ ಹಾಗೂ ಪರೀಕ್ಷೆಗೆ ಕುಳಿತುಕೊಳ್ಳುವವರ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಯಿತು. ಇನ್ನು ಸೀಟ್ ಹಂಚಿಕೆ ವಿಚಾರದಲ್ಲೂ ಕೂಡ ನಾನು ಎರಡ್ಮೂರು ಉದಾಹರಣೆಗಳನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. 1996 ರಲ್ಲಿ ಮೆಡಿಕಲ್ ಸೀಟ್ಸ್ 1778, ಡೆಂಟಲ್ ಸೀಟ್ಸ್ 1579 ಹಾಗೂ ಇಂಜಿನಿಯರಿಂಗ್ ಸೀಟ್ಸ್ 16017, ಹಾಗೆಯೇ ಎಸ್.ಸಿ. ವರ್ಗದವರಿಗೆ ಮೆಡಿಕಲ್ ಸೀಟ್ಸ್ 169 ಜನ ತೆಗೆದುಕೊಂಡರು, 139 ವಿದ್ಯಾರ್ಥಿಗಳು ಡೆಂಟಲ್ ಸೀಟ್ಸ್ ತೆಗೆದುಕೊಂಡರು. 1259 ವಿದ್ಯಾರ್ಥಿಗಳು ಇಂಜಿನಿಯರಿಂಗ್ ಸೀಟ್ಸ್‌ಗಳನ್ನು ತೆಗೆದುಕೊಂಡರು. ಹಾಗೆಯೇ ಎಸ್.ಟಿ ವರ್ಗದಲ್ಲಿ ಹಾಗೂ ಕ್ಯಾಟಗರಿ ಎ, 2ಎ, 2ಬಿ, 3ಎ, 3ಬಿ ಜನರಲ್ ಮೆರಿಟ್ ಹೀಗೆ ನಮ್ಮಲ್ಲಿ ಸುಮಾರು 34 ಕ್ಯಾಟಗರಿಗಳು ಇವೆ. ಆ 34 ಕ್ಯಾಟಗರಿಗಳಿಗೆ ನಾವು ಪ್ರವೇಶವನ್ನು ನಿಗದಿ ಮಾಡಿದೆವು. ಈ 34 ಕ್ಯಾಟಗರಿಗಳಲ್ಲೂ ಕೂಡ ಕನ್ನಡಿಗರು, ರೂರಲ್ ಮತ್ತು ಜನರಲ್ ಮೆರಿಟ್, ಅದರಲ್ಲಿ ಗ್ರಾಮೀಣ ಪ್ರದೇಶದವರಿಗೆ, ಶೆಡ್ಯೂಲ್ಡ್ ಕ್ಯಾಸ್ಟ್‌ನಲ್ಲಿ ಗ್ರಾಮೀಣ ಪ್ರದೇಶದವರಿಗೆ, ಶೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಗ್ರಾಮೀಣ ಪ್ರದೇಶದವರಿಗೆ ಮತ್ತು ಕರ್ನಾಟಕ,

ಕರ್ನಾಟಕೇತರ ಹೀಗೆ ಸುಮಾರು 34 ಕ್ಯಾಟಗರಿಗಳಿಗೆ ಪ್ರವೇಶ ನಿಗದಿ ಮಾಡಿ ಅದರಲ್ಲಿ ಸ್ಪೋರ್ಟ್ಸ್, ಫಿಸಿಕಲಿ ಹ್ಯಾಂಡಿಕ್ಯಾಪ್ಡ್, ಎನ್.ಸಿ.ಸಿ. ಹೀಗೆ ಎಲ್ಲಾ ಪ್ರತಿಯೊಂದು ವರ್ಗಕ್ಕೂ ಸುಪ್ರೀಂಕೋರ್ಟ್‌ನವರ ಆದೇಶ ಇದೆ ಯಾರು ಕ್ಯಾಟಗರಿಗೆ ರಿಸರ್ವೇಶನ್ ಕೊಡಬೇಕು ಎಂದು ಸುಪ್ರೀಂಕೋರ್ಟ್‌ನವರು ತೀರ್ಮಾನ ಕೊಟ್ಟಿದ್ದಾರೆ. ನಮ್ಮ ರಾಜ್ಯದ ಮೀಸಲಾತಿ ಆಧಾರದ ಮೇಲೆ ಪ್ರತಿಯೊಂದು ವರ್ಗಕ್ಕೆ ಅದು ಫಿಸಿಕಲಿ ಹ್ಯಾಂಡಿಕ್ಯಾಪ್ಡ್ ಇರಬಹುದು, ಎನ್.ಸಿ.ಸಿ. ಕೋಟಾ ಇರಬಹುದು, ಪ್ರತಿಯೊಂದಕ್ಕೂ ನಾವು ಸುಪ್ರೀಂಕೋರ್ಟ್‌ನವರ ನಿರ್ದೇಶನದಂತೆ ಮತ್ತು ನಾವೇನೂ ಕಾನೂನುಗಳನ್ನು ಮಾಡಿದ್ದೇವೆ ಆ ಕಾನೂನುಗಳನ್ನು ಪ್ರಶ್ನೆ ಮಾಡಿ ಪ್ರಶ್ನೆಯನ್ನು ಸುಪ್ರೀಂಕೋರ್ಟ್‌ನವರು ಎತ್ತಿಹಿಡಿದು ಈ ಎಲ್ಲಾ ವರ್ಗದವರಿಗೆ ಮೀಸಲಾತಿಯನ್ನು ನಮ್ಮ ರಾಜ್ಯದಲ್ಲಿ ಅನುಸರಿಸಿಕೊಂಡು ಬಂದಿದ್ದೇವೆ. ಪ್ರತಿಯೊಂದನ್ನು ಕ್ಯಾಟಗರಿವೈಸ್ ಮತ್ತು ಸಬ್ಜೆಕ್ಟ್‌ವೈಸ್, ಅದು ಕಂಪ್ಯೂಟರ್ ಎಜುಕೇಷನ್ ಇರಬಹುದು, ಎಲೆಕ್ಟ್ರಾನಿಕ್ಸ್ ಇರಬಹುದು, ಅದಕ್ಕೂ ರೂರಲ್ ಕೋಟಾ ಅಂದರೆ 34 ಕ್ಯಾಟಗರಿಗಳಿಗೆ, ಅದರಲ್ಲಿ ಕೆಲವು ಪೇಮೆಂಟ್ ಸೀಟ್ ಬಿಟ್ಟರೆ ಮಿಕ್ಕ ಪ್ರತಿಯೊಂದಕ್ಕೂ ರೂರಲ್ ಕೋಟಾ ಕೊಡಲಾಗಿದೆ. ಅದಕ್ಕೇ ನಾನು ಕ್ಯಾಟಗರಿ ಏನೇನು ಎಂಬ ಬಗ್ಗೆ ನಾನು ಈಗ ಹೇಳುತ್ತೇನೆ. ಜನರಲ್ ಮೆರಿಟ್, ಜನರಲ್ ಮೆರಿಟ್ ರೂರಲ್, ಜನರಲ್ ಮೆರಿಟ್ ಕನ್ನಡ, ಜನರಲ್ ಮತ್ತೆ ರೂರಲ್ ಮತ್ತು ಕನ್ನಡ, 2 ಎ ಜನರಲ್, 2 ಎ ರೂರಲ್...

ಶ್ರೀತಿ ನಫೀಜಾ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :- ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸೋಮಶೇಖರ್‌ರವರು ನಾನು ಹೇಳುವುದನ್ನು ದಯವಿಟ್ಟು ಕೇಳಬೇಕು. ಮಾನ್ಯ ಅಧ್ಯಕ್ಷರೆ, ಇವೆಲ್ಲಾ ಎಲ್ಲರಿಗೂ ಗೊತ್ತಿದೆ. Hon'ble Member says about Unnikrishnan case. ಎಲ್ಲರಿಗೂ ಅದರ ಬಗ್ಗೆ ಗೊತ್ತು. But 11-Member Bench has made and they have set aside Unnikrishnan case. That is the problem. ತಾವು ಹೇಳುತ್ತಾ ಇರುವುದು ನನಗೆ ಗೊತ್ತಿದೆ. ನಾನು ಇದ್ದಾಗಲೂ ನಾವು ಇದೇ ತರಹಾನೇ ಮಾಡುತ್ತಾ ಇದ್ದೆವು. ಆದರೆ ತಾವೇನು ಒಂದು ತಪ್ಪು ತಿಳಿದುಕೊಳ್ಳುತ್ತಾ ಇದ್ದೀರಿ ನಮ್ಮ ಕೈನಲ್ಲಿ ಈಗ ಏನೂ ಮಾಡುವುದಕ್ಕಾಗುವುದಿಲ್ಲ, ಆದುದರಿಂದ ನಾವೇನು ಮುಂದಕ್ಕೆ ಮಾಡಬೇಕು, ಅದರ ಬಗ್ಗೆ ನಮ್ಮ ಉನ್ನತ ಶಿಕ್ಷಣ ಮಂತ್ರಿಗಳು ಮೇಲ್ಮನೆಯಲ್ಲಿ ಮಾತನಾಡುತ್ತಾ, ಆಶ್ವಾಸನೆ ಕೊಟ್ಟು ಇದರ ಬಗ್ಗೆ ನಾವುಗಳು ಕುಳಿತುಕೊಂಡು ಮಾತನಾಡಿ ಇದಕ್ಕೆ ಏನಾದರೂ ಒಂದು ಪರಿಹಾರ ಕಂಡುಹಿಡಿಯೋಣವೆಂದು ಹೇಳಿದ್ದಾರೆ. This is before the Unnikrishnan Judgement was there. But, now that was over-ruled by the full Bench. ಅದೇ ಸಮಸ್ಯೆ ಈಗ ಇರುವುದು. ಅದನ್ನು ಈಗ ಹೇಳಿದರೆ ಏನೂ ಪ್ರಯೋಜನವಿಲ್ಲ ಈಗ ಮುಂದಕ್ಕೆ ಏನು ಮಾಡಬೇಕು ಅದರ ಬಗ್ಗೆ ಸರ್ಕಾರ ನೋಡಬೇಕು.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ನಾನು ಅದೇ ವಿಚಾರವಾಗಿ ಮುಂದೆ ಹೇಳುವವನಿದ್ದೇನೆ. ಯಾವ ಅಂಶಗಳನ್ನು ಲೆವನ್ ಜಡ್ಜ್ ಬೆಂಚ್ ಓವರ್ ರೂಲ್ ಮಾಡಿದೆ, ಮತ್ತು ಅದನ್ನು ಇನ್ನು ನಾವು ಯಾವ ಆಧಾರದ ಮೇಲೆ ಪಾಲನೆ ಮಾಡಬಹುದು ಎನ್ನುವುದರ ಬಗ್ಗೆ ಹೇಳಬಯಸುತ್ತೇನೆ. ಈಗ ನಮ್ಮ ಬೈರೇಗೌಡರು ಒಂದು ವಿಚಾರವನ್ನು

ಎತ್ತಿದ್ದರಲ್ಲಾ, ಅದಕ್ಕೇ ನಾನು ಹೇಳುತ್ತಾ ಇದ್ದೇನೆ. ಎಷ್ಟು ಕ್ಯಾಟಗರಿ ಎಂದಾಗ ಜನರಲ್, 2ಬಿ ಜನರಲ್ , 2 ಬಿ ರೂರಲ್, 2 ಬಿ ಕನ್ನಡ 3 ಎ ಜನರಲ್, 3ಎ ರೂರಲ್, 3 ಎ ಕನ್ನಡ, 3 ಬಿ ಜನರಲ್, 3 ಬಿ ರೂರಲ್, ಅದರಂತೆ ಎಸ್.ಸಿ. ರೂರಲ್, ಎಸ್.ಟಿ. ರೂರಲ್ ಮತ್ತು ಶೆಡ್ಯೂಲ್ಡ್‌ನಲ್ಲಿ ಪೇಮೆಂಟ್ - ಕರ್ನಾಟಕ ಪೇಮೆಂಟ್ - ನಾನ್ ಕರ್ನಾಟಕ, ಹೀಗೆ ಪ್ರತಿಯೊಂದು ಕ್ಯಾಟಗರಿಯಲ್ಲೂ ರೂರಲ್ ರಿಸರ್ವೇಶನ್ ಇದೆ, ಮತ್ತು ಅದರಲ್ಲಿ ಆಂಗ್ಲೊ-ಇಂಡಿಯನ್, ಡಿಫನ್ಸ್ ಎಕ್ಸ್ - ಡಿಫೆನ್ಸ್ ಎನ್.ಸಿ.ಸಿ., ಸ್ಪೋರ್ಟ್ಸ್, ಫಿಸಿಕಲಿ ಹ್ಯಾಂಡಿಕ್ಯಾಪ್ಡ್, ಪೊಲಿಟಿಕಲಿ ಸಫರರ್ಸ್ ಸ್ಕೌಟ್ಸ್ ಅಂಡ್ ಗೈಡ್ಸ್, ಈ ಎಲ್ಲಾ ಕ್ಯಾಟಗರಿಗಳಿಗೂ ನ್ಯಾಯಬದ್ಧವಾದ ಅವಕಾಶಗಳಿವೆ. ಪ್ರವೇಶದಲ್ಲಿ ಕಾನೂನುಬದ್ಧವಾಗಿಯೇ ಅವಕಾಶಗಳಿವೆ. ಇವೆಲ್ಲಾ ಸೇರಿ ನಾವು ಶೇಕಡ 50ರಷ್ಟು ಮೆರಿಟ್ ಶೇಕಡ 35 ರಷ್ಟು ಪೇಮೆಂಟ್ ಸೀಟ್ಸ್ ಹಾಗೂ ಶೇಕಡ 15 ರಷ್ಟು ಮ್ಯಾನೇಜ್‌ಮೆಂಟ್‌ಗೆ ಎಂದು ಹೇಳಿ ಪೇಮೆಂಟ್ ಸೀಟ್ಸ್‌ಗೆ ಈ ಎಲ್ಲಾ ವರ್ಗಗಳೂ ಬಂದಿವೆ. ಜನರಲ್ ಸೀಟ್ಸ್‌ನಲ್ಲಿ ರೂರಲ್ ಕೂಡ ಇದೆ. ಇನ್ನು ನಮ್ಮ ಕರ್ನಾಟಕದಲ್ಲಿ ಸುಮಾರು 28 ಮೆಡಿಕಲ್ ಕಾಲೇಜ್‌ಗಳು ಇವೆ, 39 ಡೆಂಟಲ್ ಕಾಲೇಜ್‌ಗಳು ಇವೆ, ಇದರಲ್ಲಿ ಒಂದು ಗೌವರ್ನಮೆಂಟ್ ಮೆಡಿಕಲ್ ಕಾಲೇಜ್‌ನಲ್ಲಿ 4 ಗೌವರ್ನಮೆಂಟ್‌ನದ್ದು ಇದೆ. ಇಂಜಿನಿಯರಿಂಗ್ ಕಾಲೇಜ್‌ಗಳು 107 ಇವೆ. ಇದುವರೆಗೂ ಈ 107 ಇಂಜಿನಿಯರಿಂಗ್ ಕಾಲೇಜ್‌ಗಳಿಗೆ ಸುಮಾರು 31395 ಸೀಟ್ಸ್‌ಗಳನ್ನು ಸಿ.ಇ.ಟಿ. ಮುಖಾಂತರ ನಾವು ಹಂಚುತ್ತಿದ್ದೇವೆ. ಮೆಡಿಕಲ್ ಕಾಲೇಜ್‌ಗಳಿವೆ 2452 ಸೀಟ್‌ಗಳನ್ನು ಹಾಗೂ ಡೆಂಟಲ್ ಕಾಲೇಜ್‌ಗಳಿಗೆ 1629 ಸೀಟ್ಸ್‌ಗಳನ್ನು ಹಂಚುತ್ತಿದ್ದೇವೆ. ಇಲ್ಲಿ ಪ್ರವೇಶ ಹೇಗೆ ಮಾಡುತ್ತಿದ್ದೇವೆಂದರೆ ಸುಮಾರು 40 ಸೆಂಟರ್‌ಗಳಲ್ಲಿ ಆಯಾಯ ವಿದ್ಯಾರ್ಥಿಗಳಿಗೆ ಅನುಕೂಲವಾಗಿ ಕರ್ನಾಟಕದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಬೇರೆ ಬೇರೆ ಪ್ರಮುಖವಾದಂಥ ನಗರಗಳಲ್ಲಿ ಈ ಸಿ.ಇ.ಟಿ ಪರೀಕ್ಷೆಯನ್ನು ನಡೆಸಿ ಈ ವಿದ್ಯಾರ್ಥಿಗಳ ಅನುಕೂಲಕ್ಕೋಸ್ಕರ 40 ಕೇಂದ್ರಗಳಲ್ಲಿ ಈ ಪರೀಕ್ಷೆಯನ್ನು ನಾವು ನಡೆಸಿಕೊಂಡು ಬಂದಿದ್ದೇವೆ. ಇದು ಯಶಸ್ವಿಯಾಗಿ ನಡೆದುಕೊಂಡು ಬಂದಿದೆ. 1976 ರಿಂದ 2002ನೇ ಇಸವಿಯವರೆಗೂ ಸುಮಾರು 162 ಕೇಸ್‌ಗಳು ಸುಪ್ರೀಂಕೋರ್ಟ್ ಮುಂದೆ ಇತ್ತು. ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದ ಹಾಗೆ ಈ ಲೆವನ್ ಜಡ್ಜ್ ಬೆಂಚ್ ಮುಂದೆ ಇರತಕ್ಕಂಥದ್ದು ಆರ್ಟಿಕಲ್ 30 ರ ಪ್ರಕಾರ ಮೈನಾರಿಟಿ ಎಜುಕೇಶನ್ ಇನ್ಸ್‌ಟಿಟ್ಯೂಶನ್ಸ್ ವಿಚಾರವಾಗಿ ಈ ತೀರ್ಪನ್ನು ಕೊಡಬೇಕು ಎನ್ನತಕ್ಕಂಥ ಒಂದು ಅಂಶ ಸುಪ್ರೀಂ ಕೋರ್ಟ್ ಮುಂದೆ ಇತ್ತು. ಆಗ ಸುಪ್ರೀಂ ಕೋರ್ಟ್‌ನವರು ಈ ಎಲ್ಲಾ 162 ಕೇಸ್‌ಗಳನ್ನು ತೆಗೆದುಕೊಂಡು 31-10-2002 ರಲ್ಲಿ ಒಂದು ತೀರ್ಪನ್ನು ಕೊಟ್ಟಿದ್ದಾರೆ. ಅವರು ಏನು ತೀರ್ಪನ್ನು ಕೊಟ್ಟಿದ್ದಾರೆ ಎಂದರೆ. ಶ್ರೀಮತಿ ನಫೀಜಾ ಫಜಲ್‌ರವರು ಇದನ್ನು ಕೇಳಬೇಕು. ಉನ್ನಿಕೃಷ್ಣನ್ ಕೇಸ್‌ನ್ನು ಯಾವ ವಿಚಾರದಲ್ಲಿ ಓವರ್‌ರೂಲ್ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ನಾನು ಕೇಳುತ್ತೇನೆ. In para 45, it is saidlâ:

"In view of the discussions hereinabove we hold that the decision in Unnikrishnan case in so far as it framed the scheme relating to the grant of admission and the fixing of the fees was not correct and to that extent the said decision and the consequent direction given to UGC, AICTE, medical Council of India, Central and State Governments etc., are over-ruled."

ಎಂದರೆ ಫಿಕ್ಸಿಂಗ್ ಆಫ್ ಫೀಜ್ ಮತ್ತು ಗ್ರಾಂಟ್ ಆಫ್ ಅಡ್ಮಿಷನ್ ಇವೆರಡನ್ನು ಓವರ್‌ರೂಲ್ ಮಾಡಿದ್ದಾರೆ. ಆದರೆ ಏಡೆಡ್ ಕಾಲೇಜುಗಳನ್ನು ನಾವು ಯಾವ ರೀತಿ ಕರೆಯಬಹುದು, ನಾನ್ ಏಡೆಡ್ ಕಾಲೇಜುಗಳನ್ನು ಯಾವ ರೀತಿ ನಾವು ಕರೆಯಬಹುದು ಮತ್ತು ಫೀಜ್ ಅನ್ನು ಫಿಕ್ಸ್ ಮಾಡತಕ್ಕಂಥ ಎಲ್ಲಾ ಹಕ್ಕನ್ನು ಏಡೆಡ್ ಕಾಲೇಜುಗಳಿಗೆ, ಸರ್ಕಾರಕ್ಕೆ ಮತ್ತು ಯೂನಿವರ್ಸಿಟಿಗೆ ಕೊಟ್ಟಿರುವುದನ್ನು ನಾವು ಮುಂದೆ ಬರತಕ್ಕಂಥ ಪ್ಯಾರಾದಲ್ಲಿ ನೋಡಬಹುದು. ಇದರಲ್ಲಿ ಹೆಚ್ಚು ಅಧಿಕಾರವನ್ನು ಮತ್ತು ಸ್ವಾತಂತ್ರ್ಯವನ್ನು ಅನ್ ಏಡೆಡ್ ಮೈನಾರಿಟೀಸ್ ಇನ್ಸಿಟ್ಯೂಷನ್‌ಗಳಿಗೆ, ಅನ್ ಏಡೆಡ್ ರಿಲೀಜಿಯಸ್ ಅಂಡ್ ಲಿಗ್ವೆಂಸ್ಟಿಕ್ ಮೈನಾರಿಟೀಸ್ ಇನ್ಸ್‌ಟಿಟ್ಯೂಷನ್‌ಗೆ ಕೊಟ್ಟಿದ್ದಾರೆ. ಆದರೆ ಏಡೆಡ್ ಮೈನಾರಿಟಿ, ಏಡೆಡ್ ಪ್ರೈವೇಟ್ ಇನ್ಸಿಟಿಟ್ಯೂಷನ್ ಇರಬಹುದು, ಎಲ್ಲಾ ಕಾಲೇಜುಗಳಿಗೆ ಸರ್ಕಾರಕ್ಕೆ....

ಡಾ।। ಜಿ. ಪರಮೇಶ್ವರ್:- ಮಾನ್ಯ ಅಧ್ಯಕ್ಷರೆ, ಪ್ಯಾರಾ 31 ನ್ನು ತಾವು ನೋಡಿದರೆ,

"Counsel for the institutions, as well as the Solicitor Ceneral, submitted that the decision in Unni Krishnan's case, in so far as it had framed the scheme relating to the grant of admission and the fixing of the fee, was unreasonable and invalid."

These are the only two questions. It is only the admission and the fee structure. Nothing else. It was said unreasonable. That why they said Unnikrishnan's Judgement is unreasonable. Very clearly, they have mentioned. Becouse this question does not arise in respect of the aided colleges and the government colleges. 100% seat is left to the government. It only un-aided and sinority institutions.

Sri. B. Somashekar: - In para 3' it jays

".... However, its conclusion that children below the age of 14 had a fundamental right to free education did not call for any interference."

They have said it cannot be interfered with But,

you see para 67.

ಇಂಟರ್‌ಫಿಯರ್ ಮಾಡುವುದಕ್ಕೆ ಬರುವುದಿಲ್ಲವೆಂದು ಅವರು ಹೇಳಿರುವುದು. ಪ್ಯಾರಾ 67 ಅದರಲ್ಲಿ ತಾವು ಹೆಡ್ಡಿಂಗ್ ನೋಡಿ, ಪ್ಯಾರಾ 68 ತಾವು ನೋಡಿದ್ದೀರಿ. ಅದರಲ್ಲಿ ತಾವು ಕಂಟ್ರಾಡಿಕ್ಷನ್ ಇದೆ ಎಂದು ಹೇಳಿದಿರಿ. ಪ್ಯಾರಾ 67, 68 ಗಿಂತ ಮುಂದೆ ಬರತಕ್ಕಂಥಾದ್ದು, this is in respect of private unaided professional colleges. ನಾವು ಇಲ್ಲಿ ಗಮನಿಸಬೇಕಾಗಿರುವ ಅಂಶ ಎಂದರೆ ಪ್ಯಾರಾ 68,69, 71 ಮತ್ತು 72 ಅವುಗಳನ್ನು ನೋಡಿದಾಗ ಯಾವ್ಯಾವ ಹಂತದಲ್ಲಿ ಏನೇನು ಮಾಡಿದ್ದಾರೆ, ಯಾವ್ಯಾವ ಅಂಶವನ್ನು ತೆಗೆದುಕೊಳ್ಳಬೇಕಾಗುತ್ತದೆ ಅದನ್ನು ನಾವು ತೆಗೆದುಕೊಳ್ಳಬೇಕು. ಮತ್ತೆ ಇನ್ನೊಂದು ಗಮನಿಸಬೇಕಾದಂತಹ ಅಂಶ ಎಂದರೆ ಸುಪ್ರೀಂ ಕೋರ್ಟ್‌ನಲ್ಲಿ ವಾದ ನಡೆಯುವಾಗ ಗೌರ್ವನ್ಮೆಂಟ್ ಆಫ್ ಇಂಡಿಯಾ ಸಾಲಿಸಿಟರ್

ಜನರಲ್ ಆಗಲಿ ಅಥವಾ ನಮ್ಮ ರಾಜ್ಯ ಸರ್ಕಾರದ ಅಡ್ವೊಕೇಟ್ ಜನರಲ್ ಆಗಲಿ ಅಥವಾ ಸರ್ಕಾರಕ್ಕೆ ಸಂಬಂಧಪಟ್ಟ ಅಡ್ವೊಕೇಟ್ಸ್ ಜನರಲ್ ಆಗಲಿ ಅಲ್ಲಿ ಸರಿಯಾಗಿ ವಾದ ಮಾಡಿಲ್ಲ. ಅಲ್ಲಿ ಅಪಿಯರ್ ಆಗಿದ್ದಾರಾ ಎನ್ನುವ ವಿಚಾರದಲ್ಲಿ ನನ್ನ ಅನುಮಾನ ಇದೆ. ಕಾರಣವೇನೆಂದರೆ ಪ್ರತಿಯೊಂದು ಪ್ಯಾರಾದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಏನು ಹೇಳಿದ್ದಾರೆ ಎಂದು ನೋಡಿದಾಗ ಅವರು ರೆಫರ್ ಮಾಡಿದ್ದಾರೆ. They have agreed. The Managments' Advocates have agreed. ಮ್ಯಾನೇಜ್‌ಮೆಂಟ್‌ನ ಏನು ವಾದ ನಡೆದಿದೆಯೋ, ಆ ವಾದವನ್ನು ಇವರು ಒಪ್ಪಿಕೊಂಡು ಬಂದ ಹಾಗೆ ಪ್ರತಿಯೊಂದು ಕಾಣಿಸುತ್ತದೆ. ಆ ಒಂದು ಪ್ಯಾರಾ ತಮಗೆ ಹೇಳುತ್ತೇನೆ. ಪ್ಯಾರಾ 32 ಅನ್ನು ಮಾನ್ಯ ಮಂತ್ರಿಗಳು ನೋಡಬೇಕು.

"It has been submitted by the learned counsel for the parties....

Parties means the parties who are in favour of the managments.

"..... that the implementation of the scheme by the States, which have amended their rules and regulations, has shown a number of anomalies. As already noticed, 50% of the seats are to be given on the basis of merit determined after the conduct of a common entrance test, the rate of fee being minimal. The 'payment seats' which represent the balance number, there fore, cross-subsidize the 'free seats." The experiecnce of educational institutions has been...."

That is the experience of the Managments has been taken into consideration by the Supreme Court, not the experience of the State Government or the parents. This is very important here. The Supreme courts Judges say:

" The experence of the educational institutions has been that students who come fix from private schools, and who long to more affluent families, are able to secure higher positions in the merit list of the common entrance test, and are thus able to seek admission to the 'free seats' Paradoxically, it is the students who come from less affluent families, who are normally able to secure, on the basis of the merit list prepared after the common entrance test, only 'payment seats.

ಇಲ್ಲಿ ಆ ಒಂದು ಅಭಿಪ್ರಾಯಕ್ಕೆ ಸುಪ್ರೀಂ ಕೋರ್ಟ್ ಬರಬೇಕಾದರೆ ನಮ್ಮ ರಾಜ್ಯ ಸರ್ಕಾರದ ಅಡ್ವೊಕೇಟ್ಸ್ ಏನು ಮಾಡುತ್ತಿದ್ದರು. ನಮ್ಮ ಕೇಂದ್ರ ಸರ್ಕಾರದವರು ಏನು ಮಾಡುತ್ತಿದ್ದರು? ತಮಗೆ ಗೊತ್ತಿದೆ ಹತ್ತು ವರ್ಷಗಳಿಂದ ಈಚೆಗೆ ಮೆರಿಟ್ ಸೀಟ್‌ಗೆ ಯಾವ ಕೆಟಗರಿಯಲ್ಲಿ ಇದ್ದಂತಹ ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳುತ್ತಿದ್ದರು, ಅದರ ಬಗ್ಗೆ ಇಲ್ಲಿ ಮಾಹಿತಿ ಇದೆ. ಇಲ್ಲಿ ದೊಡ್ಡ ದೊಡ್ಡ ಇಂಡಸ್ಟ್ರೀಯಲಿಸ್ಟ್ ಮಕ್ಕಳು ಹೆಚ್ಚಿಗೆ ಫೀಜ್ ಕಟ್ಟಿ ಸೀಟು ತೆಗೆದುಕೊಳ್ಳುತ್ತಿದ್ದಾರಾ ಅಥವಾ ಮಧ್ಯಮ ವರ್ಗದ ಜನ ಅಥವಾ ಬಡವರು ಪ್ರತಿಭಾವಂತ

ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ 95 ಪರ್ಸೆಂಟ್ ಪಡೆದಿರುವಂತಹ ಅವರಿಗೆ ಸೀಟು ಸಿಕ್ಕಿದೆಯಾ ಅಥವಾ ಕೇವಲ ಅಫ್ಲ್ಯುಯೆಂಟ್ ಕ್ಲಾಸ್‌ನವರು ಪೇಮೆಂಟ್ ಸೀಟ್ ತೆಗೆದುಕೊಂಡಿದ್ದಾರಾ ಅಥವಾ ಮೆರಿಟ್ ಸೀಟು ತೆಗೆದುಕೊಂಡಿದ್ದಾರಾ ಎನ್ನುವಂತಹ ಅಂಶ ಹತ್ತು ವರ್ಷಗಳ ಅನುಭವ ಅಂಶ ಸಿಇಟಿ ಸೆಲ್‌ನಲ್ಲಿ ಇದೆ. ಇದೊಂದು ಸ್ಟಾಟಿಸ್ಟಿಕ್ಸ್ ಕೊಟ್ಟಿದ್ದರೆ I think the Supreme court would not have come to the conclusion which has come to-day. There, the State Government and the central Government have miserably failed. ಇದೊಂದೆ ಪಾಯಿಂಟ್‌ನಿಂದ ಸುಪ್ರೀಂಕೋರ್ಟ್ ಈ ಒಂದು ತೀರ್ಮಾನಕ್ಕೆ ಬರುತ್ತಿರಲಿಲ್ಲವೆಂಬುದು ನನ್ನ ಅನಿಸಿಕೆ. ಈ ಸಿಇಟಿ ವ್ಯವಸ್ಥೆ ಇದೊಂದು ಸಣ್ಣಪುಟ್ಟ ವಿಚಾರಅಲ್ಲ ಲಕ್ಷಾಂತರ ವಿದ್ಯಾರ್ಥಿಗಳು ಪ್ರತಿವರ್ಷ ಪ್ರವೇಶಕ್ಕೆ ಕಾಯ್ದುಕೊಂಡಿರುತ್ತಾರೆ. ತಂದೆ ತಾಯಿಗಳು ಎರಡು ವರ್ಷದಿಂದ ಮಕ್ಕಳಿಗೆ ಪಿಯುಸಿಗೆ ಟ್ಯೂಷನ್‌ಗೆ ಕೂಡಿಸುವುದಕ್ಕೆ ಪ್ರಾರಂಭ ಮಾಡುತ್ತಾರೆ. ಏಕೆಂದರೆ ನನ್ನ ಮಗನನ್ನು ಸಿಇಟಿಗೆ ಕೂರಿಸಿ ಅವನನ್ನು ಮೆಡಿಕಲ್‌ಗೆ ಅಥವಾ ಇಂಜಿನಿಯರಿಂಗ್‌ಗೆ ಸೇರಿಸಬೇಕೆಂದು ಎರಡು ವರ್ಷಗಳ ಕಾಲ ಪರಿತಪಿಸುವುದನ್ನು ನಾವು ನೋಡಬೇಕು ಅಷ್ಟೊಂದು ತೀಕ್ಷ್ಣವಾಗಿ, ಜವಾಬ್ದಾರಿಯುತವಾಗಿ ತಂದೆತಾಯಿಗಳು ವಿದ್ಯಾಭ್ಯಾಸವನ್ನು ಕೂಡಿಸುತ್ತಾರೆ. ಲಕ್ಷಾಂತರ ಕುಟುಂಬದವರಿಗೆ ಅನ್ವಯವಾಗತಕ್ಕಂಥ ವಿಚಾರ ಇದು. ಕಾವೇರಿ ವಿಚಾರ ಎಷ್ಟು ಸೂಕ್ಷ್ಮತೆ ಇದೆಯೋ, ಡಾ॥ ರಾಜ್‌ಕುಮಾರ್ ಅಪಹರಣ, ನಾಗಪ್ಪನವರ ವಿಚಾರ ಎಷ್ಟು ತೀಕ್ಷ್ಣತೆ ಇದೆಯೋ ಅಷ್ಟೆ ತೀಕ್ಷ್ಣತೆಯಿಂದ ಕೂಡಿದಂತಹ ವಿಚಾರ ಇದು. ಅದಕ್ಕೆ ತಾವು ಮಾಡಬೇಕಾದಂತಹ ಎಲ್ಲಾ ಪ್ರಯತ್ನವನ್ನು ಮಾಡಿದ್ದೀರಿ. ಸುಪ್ರೀಂ ಕೋರ್ಟ್‌ಗೆ ಹೋಗಿ ಅಲ್ಲಿ ಕಾದಿದ್ದೀರಿ. ಇರಿಗೇಷನ್ ಸೆಕ್ರೆಟರಿ ಅಲ್ಲಿ ಕಾಯ್ದುಕೊಂಡಿರುತ್ತಾರೆ, ಅಡ್ವೊಕೇಟ್ ಜನರಲ್ ಮತ್ತು ಇರಿಗೇಷನ್ ಮಂತ್ರಿಗಳು ಕಾಯ್ದುಕೊಂಡಿರುತ್ತಾರೆ. ಎಲ್ಲಾ ಇರುತ್ತಾರೆ. ಈ ಒಂದು ಹಿಯರಿಂಗ್ ನಡೆದು ತೀರ್ಪು ಬರುವಾಗ, ರಾಜ್ಯದವರು ಆಗಲಿ, ಅಡ್ವೊಕೇಟ್ ಜನರಲ್ ಆಗಲಿ, ಕೇಂದ್ರದವರಾಗಲಿ ಏನು ಮಾಡುತ್ತಿದ್ದೀರಿ? ಇದು ಗಮನಿಸಬೇಕಾದಂತಹ ಅಂಶ. ಪ್ರತಿಯೊಂದು ಪ್ಯಾರಾದಲ್ಲಿ ನೋಡಿದರೆ, ಪಾರ್ಟಿಸ್ ಎಂದರೆ, ಮ್ಯಾನೇಜ್‌ಮೆಂಟ್ ಪರವಾಗಿ ವಾದವನ್ನು ಕೇಳಿದ್ದಾರೆ ಹೊರತು ಸರ್ಕಾರದ ಪರವಾಗಿ ವಾದ ಕೇಳಿರುವುದು ಯಾವ ಪ್ಯಾರಾದಲ್ಲೂ ಬಂದಿಲ್ಲ. ಪೇರೆಂಟ್ಸ್ ಪರವಾಗಿ ಯಾರೂ ವಾದ ಮಾಡಿಲ್ಲ. ವಿದ್ಯಾರ್ಥಿಗಳ ಪರವಾಗಿ ಯಾರೂ ವಾದ ಮಾಡಿಲ್ಲ. ಇದು ಒನ್ ಸೈಡೆಡ್ ಡಿಸಿಷನ್ ಎಂಬುದು ನಮ್ಮ ಒಂದು ಅನುಮಾನ. ಆದುದರಿಂದ ಈ ತೀರ್ಪು ಬರಬೇಕಾದರೆ ಕಾರಣಕರ್ತರಾಗಿರುವವರು ಯಾರಿದ್ದಾರೆ ಅವರು ನೈತಿಕ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಎಂದರೆ ಈ ರಾಜ್ಯ ಸರ್ಕಾರ ಮತ್ತೆ ಪ್ಯಾರಾ 59ರಲ್ಲಿ ಏನು

In para 59, it is said:

"Merit is usually determined for admission to profeessional and higher education colleges, by either the marks that the student obtains at the qualifying examination or school leaving certificate stage followed by the interview, or by a common entreance text conducted by the institution, or in the case of professional colleges, by government agencies."

It has been made very clear that the entrance test can be conducted by the State Government or by the colleges.

5.50 ಪಿಎಂ

In para 57 also, it is said:

"We however, wish to emphasize one point, and that is that in as much as the occupation of edcuaion is, in a sense, regarded as charitable, the government can provide regulations that will ensure excellence in education, while for bidding the charging of capitation fee and profiteering by the institution. Since the object of setting up an educational instituion is by definition 'charitable, it is clear that an educational institution cannot charge such a fee as is not required for the purpose of fulfilling that object."

ಅಲ್ಲಿ ಏನು ಹೇಳಿದ್ದಾರೆ, ಚಾರಿಟಬಲ್ ಪರ್‌ಪಸ್‌ಗೋಸ್ಕರ ಎಜುಕೇಷನ್ ನಡೆಸಬೇಕೆಂದು ಹೇಳಿದ್ದಾರೆ. ಫೀಜನ್ನು ಯಾವ ರೀತಿಯಾಗಿ ಕಲೆಕ್ಟ್ ಮಾಡಬೇಕೆಂಬುದನ್ನು ಹೇಳಿದ್ದಾರೆ, ಮತ್ತೆ ಪ್ಯಾರ ನಂ: 69 ರಲ್ಲಿ ಏನು ಹೇಳಿದ್ದಾರೆಂದರೆ,

In para 69, it says:

"..... Managment will have the right to select teachers as per the qualifications and eligibility conditions laid down by the State/ University subject to adoption of a rational procedure of selection. A rational fee structure should be adopted by the Managment, which would not be entitled to charge a capitation fee approriate machinery can be devised by the State or University to ensure that no capitation fee is charged and that there is no profiteering. Conditions granting recognition or affiliation can broadly cover academic and educational matters including the welfare of students and teachers."

ಇದನ್ನು ಡಿಟರ್‌ಮಿನ್ ಮಾಡುವಂಥವರು ಯಾರು?

Appropriate machinery can be devised. Who has to devise the machinery? Can the managment themselves devise the machinery and fix the fees or can the university or the state government devise the machinery? ಇದು ನಾವು ನೋಡಬೇಕಾದಂತಹ ಮತ್ತೊಂದು ವಿಚಾರವೆಂದರೆ They have allowed the the managment to collect the ree, not the capitation fees. For the development of their instituion, the reasonable surplus money can be charged. How the reasonable surplus has to be determined? who has to determine the reasonable surplus money?

ಅದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಇದಕ್ಕೆ ಸರ್ಕಾರ ಏನಾದರೂ ಒಂದು ಕಮಿಟಿಯನ್ನು ರಚನೆ ಮಾಡಿದ್ದೀರಾ? ಇದನ್ನು ೨ಯವ ರೀತಿಯಾಗಿ ಡಿಟರ್‌ಮಿನ್ ಮಾಡಬೇಕೆಂಬ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ? ಅದನ್ನು ಇನ್ನು ಯೋಚನೆ ಮಾಡಿಲ್ಲ, ರ್‍ಯಾಷನಲ್ ಫೀ ಸ್ಟ್ರಕ್ಚರ್ ಅನ್ನು ಮಾಡಬೇಕಾದರೆ ಏನು ಮಾಡಿದ್ದಾರೆ, ಕ್ಯಾಪಿಟೇಷನ್ ಫೀಸನ್ನು ಕಲೆಕ್ಟ್ ಮಾಡಬಾರದೆಂದು ಸುಪ್ರೀಂ ಕೋರ್ಟ್‌ನವರು ಏನು ಹೇಳಿದ್ದಾರೆ, ಇದಕ್ಕೆ ಸಂಬಂಧವಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಇದನ್ನು ಹೇಳಬೇಕಾಗುತ್ತದೆ, ಇನ್ನು ಪ್ಯಾರ ನಂ:71 ರಲ್ಲಿ ಮತ್ತು 72 ರಲ್ಲಿ

In para 71, is said:

"While giving aid to professioal institutions, it would be permissible for the authority giving aid to prescribe by rules or regulations, the conditions on the basis of which admission will be granted to different aided colleges by virtue of merit, coupled with the reser vation policy of the State."

ಅಂದರೆ ಇದರಲ್ಲಿ ಏನು ಹೇಳಿದ್ದಾರೆಂದರೆ ರಿಜರ್ವೇಶನ್ ಪಾಲಿಸಿಯನ್ನು ಮೈನ್‌ಟೈನ್ ಮಾಡಬೇಕು ಮತ್ತೆ ಏಡೆಡ್ ಕಾಲೇಜುಗಳಿಗೆ ಅಡ್‌ಮಿಷನ್ಸ್, ರೆಗ್ಯೂಲೇಷನ್ಸ್ ಯಾವ ರೀತಿಯಾಗಿ ಮಾಡಬೇಕು, ಎಂಬ ಬಗ್ಗೆ ಸರ್ಕಾರ ನಿಗದಿ ಮಾಡಬಹುದೆಂದು ಇದೆ. ಇದಕ್ಕೆ ಮೊದಲು ಯಾವ ಕಾಲೇಜುಗಳು ಏಡೆಡ್, ಯಾವ ಕಾಲೇಜುಗಳು ಅನ್ - ಏಡೆಡ್ ಎಂಬ ಬಗ್ಗೆ ತೀರ್ಪು ಕೊಡತಕ್ಕಂಥ ಅಧಿಕಾರವನ್ನು ಸುಪ್ರೀಂ ಕೋರ್ಟ್‌ನವರು ಮ್ಯಾನೆಜ್‌ಮೆಂಟ್‌ಗೆ ಕೊಟ್ಟಿಲ್ಲ. ಸುಪ್ರಿಂ ಕೋರ್ಟ್ ಹೇಳಿರತಕ್ಕಂಥಾದ್ದು....

11-Judge Bench of the Supreme Court has stated only in respect of admissions and fixing of fees. ಏಡೆಡ್, ಅನ್ ಏಡೆಡ್ ಯಾವುದು? ಅನ್ - ಏಡೆಡ್‌ಗೆ ಯಾವ ರಿಜರ್ವೇಶನ್ ಪಾಲಿಸಿಯನ್ನು ಮಾಡಬೇಕು ಏಡೆಡ್ ಇನ್‌ಸ್ಟಿಟ್ಯೂಶನ್‌ಗಳಿಗೆ ಯಾವ ರೀತಿ ರಿಜರ್ವೇಶನ್ ಪಾಲಿಸಿಯನ್ನು ಮಾಡಬಹುದು, ಮತ್ತೆ ಯಾವ ರೀತಿಯಾಗಿ ರೆಗ್ಯುಲೇಷನ್ ನಿಗದಿ ಮಾಡಬೇಕೆಂಬ ಬಗ್ಗೆ ಸರ್ಕಾರ ಅಧಿಕಾರ ಇದೆ, ಎನ್ನುವುದನ್ನು ಹೇಳಿದ್ದಾರೆ. ಅದನ್ನು ಏನು ಮಾಡಿದ್ದೀರಿ, ಅದನ್ನು ಏಡೆಡ್ ಇನ್‌ಸ್ಟಿಟ್ಯೂಶನ್ ಎಂದರೆ ಶ್ರೀ ಉನ್ನಿಕೃಷ್ಣನರವರ ಜಡ್ಜ್‌ಮೆಂಟ್‌ನಲ್ಲಿ.....

ಶ್ರೀಮತಿ ನಫೀಸಾ ಫಜಲ್:- ಮಾನ್ಯ ಅಧ್ಯಕ್ಷರೇ, ಏಡೆಡ್ ಇನ್‌ಸ್ಟಿಟ್ಯೂಷನ್‌ಗಳ ಬಗ್ಗೆ ಏನೂ ತೊಂದರೆಗಳು ಇಲ್ಲ, ಮಾನ್ಯ ಮಂತ್ರಿಗಳು ಈಗ ಹೇಳಿದ್ದಾರೆ.

The Minister has just now said that for the aided institutions whatever it is, the CET will be conducted as it was being conducted Reservations will be there. Everything will be there. ಏನು ತೊಂದರೆ ಇದೆ, ಎಂಬುದು ನಮಗೆ ಅರ್ಥವಾಗುತ್ತಾ ಇಲ್ಲ ಮಾನ್ಯ ಸೋಮಶೇಖರ್‌ರವರು ಏಕೆ ಅಷ್ಟು ಶ್ರಮ ಪಡುತ್ತಿದ್ದಾರೆಂಬುದು ನಮಗೆ ಅರ್ಥವಾಗುತ್ತಿಲ್ಲ, ಎಲ್ಲರಿಗೂ ಗೊತ್ತು.

ಶ್ರೀ ಬಿ. ಸೋಮಶೇಖರ್:- ಮಾನ್ಯ ಮಂತ್ರಿಯವರು ತಾತ್ವಿಕವಾಗಿ ಎರಡು ವಿಚಾರಗಳನ್ನು ಹೇಳಿದ್ದಾರೆಂದು ಮಾನ್ಯ ಎಸ್. ಸುರೇಶ್ ಕುಮಾರ್‌ರವರು ಹೇಳಿದ್ದಾರೆ ಅದೇನೆಂದರೆ ನಾವು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುತ್ತೇವೆ, ಮತ್ತೆ ಮೆರಿಟ್ ಬಗ್ಗೆ ನಾವು ಯಾವುದೇ ಕಂಪ್ರೂಮೈಸ್ ಮಾಡುವುದಿಲ್ಲವೆಂದು ಹೇಳಿದರು, ಮತ್ತೆ ಮೂಲಾಜಿಗೂ ಒಳಗಾಗುವುದಿಲ್ಲವೆಂದು ಹೇಳಿದರು, ಬಹಳ ಸಂತೋಷ ಆದರೆ ಇದು ಈ ಬೆಳವಣಿಗೆಯಲ್ಲಿ ಪ್ರತಿಬಿಂಬಿಸುತ್ತಿದೆಯೇ? ಆ ದಿಕ್ಕಿನಲ್ಲಿ ಸರ್ಕಾರ ಯಾವ ರೀತಿಯಾಗಿ ಕಾರ್ಯೋನ್ಮುಖವಾಗಿದೆ ಎಂಬುದನ್ನು ನೋಡುವುದಾದರೆ, ಉನ್ನಿಕೃಷ್ಣನ್‌ರವರ ಜಡ್ಜ್‌ಮೆಂಟ್‌ನಲ್ಲಿ ಒಂದು ಕಡೆ ಹೇಳಿದ್ದಾರೆ.

"Private educational institutions may be aided as well as unaided. Aid giving by the Government may be cant per cent or partial. So far as aided institutions are concerned, it is evident that they have to abide by all the rules and regulations as may be framed by the Government and recognition affiliation authorities in the matter of recruitment or teachers and staff."

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ್ ಡಿಸಿಷನ್ ವೃತ್ತಿಪರ ಶಿಕ್ಷಣ ಪ್ರವೇಶ ನೀತಿ ಮತ್ತು ಶುಲ್ಕ, ಖಾಸಗಿ ಅನುದಾನ ರಹಿತ ಮತ್ತು ಅಲ್ಪ ಸಂಖ್ಯಾತರು, ಅವರಿಗೆ ಬಿಟ್ಟಿರುವಂಥಾದ್ದು ಎಂದು ಹೇಳಿರುವಂಥಾದ್ದು, ಅಲ್ಲಿಗೆ ಶ್ರೀ ಉನ್ನಿಕೃಷ್ಣನ್‌ರವರ ವಿಚಾರ ಮುಗಿಯುತ್ತದೆ. ಈಗ ಸಬ್ಸಿಕ್ವೆಂಟಾಗಿ ಈ ಸುಪ್ರೀಂ ಕೋರ್ಟ್ ತೀರ್ಮಾನ ಏನಿದೆ, ಅದರ ಮೇಲೆ ಪ್ರವೇಶ ನೀತಿಯನ್ನು ನಾವು ಅಳವಡಿಸಿಕೊಳ್ಳಬೇಕು.
to regulate that, i.e., the State Government.

**SRI B. SOMASHEKHAR:-** Unnikrishna's case has been over-ruled only in respect of this. Not all.
ನಾನು ಓದಿದ ಪ್ರಕಾರ 45ನಲ್ಲಿ ಓದಿದ್ದೇನೆ.

**SMT. NAFES FAZAL:-** Only unaided we are talking about. now

ಶ್ರೀ ಬಿ. ಸೋಮಶೇಖರ್:- ನಾನು 45 ರಲ್ಲಿ ಓದಿದ್ದೇನೆ, ಯಾವುದನ್ನು ಏಡೆಡ್ ಎಂದು ಕರೆಯುತ್ತಾರೆ?

ಚೇರ್ಮನ್:- ಮಾನ್ಯ ಸೋಮಶೇಖರ್‌ರವರೇ, ಮಾನ್ಯ ಸಚಿವರು ಕೇಳುತ್ತಿರುವಂಥಾದ್ದು ಏಡೆಡ್ ಮತ್ತು ಅನ್ ಏಡೆಡ್‌ಗೆ ಡಿಫರೆನ್ಸ್ ಕೇಳುತ್ತಿದ್ದಾರೆ.

**Dr. G. Parameshwar:-** You please see para 72, ನೋಡಿ, ಏಡೆಡ್‌ಗೆ ಏನು ಹೇಳಿದ್ದಾರೆಂದರೆ.

"Normally, the aid that is granted is relatable to the pay and alowances of the teaching staff. In addition, the Managment of the private aided institutions has to incur revenue and capital expenses. Such aided institutions cannot obtain that extent of authonomy in

relation to managment and administration as would be available to a private unaided institution...."

That is the difference between the unaided institutions and the private sided institutions In spite of that, they cannot avail that facility. i.e., managment and administration. That will be vested with the Government only ಅದರಲ್ಲಿ ತಾವು ರಿಜರ್ವೇಷನ್ ಅನ್ನು ಏನು ಪಾಯಿಂಟ್ ಔಟ್ ಮಾಡಿದ್ದೀರಿ. All that reservation rules will be applicable to the aided institutions.

ಶ್ರೀ ಬಿ. ಸೋಮಶೇಖರ್:- ಇದನ್ನು ತಾವು ಫಾಲೋ ಮಾಡುತ್ತೀರಾ? ಈಗ ಏಡೆಡ್ ಎಂದರೆ ಇದನ್ನು ಹೇಳಿದ್ದಾರೆ.

For example:

"A medical college does not necessarily require a hospital, we are told that for medical colleges there must be a fully equipped 700-hed hospitals. Then alone the medical college can be allowed to function. A state Medical College may not have or may not estalish a hospital of its own. If they request the government and the government may permit it to avail the services of a government hospital for the purpose of free of charges.

ಅಂದರೆ ನಮಗೆ ಗೊತ್ತಿರುವ ಹಾಗೆ ಬಹಳ ಮೆಡಿಕಲ್ ಕಾಲೇಜುಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಇರುವಂತಹ ಕ್ಲೀನಿಕಲ್ ಫೆಸಿಲಿಟೀಸ್‌ಗಳನ್ನು ಉಪಯೋಗಿಸಿಕೊಳ್ಳುತ್ತೇವೆ, ಏತಕ್ಕೆಂದರೆ ತಮ್ಮದೇ ಆದಂತಹ ಆಸ್ಪತ್ರೆಗಳು ಇಲ್ಲ.

That is one way of aid ಎಂದು ಸುಪ್ರೀಂ ಕೋರ್ಟ್‌ನ ತೀರ್ಮಾನವಾಗಿದೆ. ಅದರಲ್ಲಿ 100 ಸೀಟುಗಳಿಗೆ ಸುಮಾರು 500 ಬೆಡ್ಸ್‌ಗಳು ಬೇಕೆಂದು ಇದೆ, ಮೊದಲು 1:7 ಎಂದು ಇತ್ತು. ಈಗ 1:5 ಎಂದು ಇದೆ. ಈಗ ಅದರಲ್ಲೂ ಏನು ಹೇಳಿದ್ದಾರೆಂದರೆ 1:5 ನಲ್ಲಿ ರೆಕಗ್ನಿಷನ್ ಕೊಡುವಂತಹ ಸಂದರ್ಭದಲ್ಲಿ ಖಾಲಿ ಬೆಡ್‌ಗಳನ್ನು ತಂದು ಯಾರೋ ಪಬ್ಲಿಕ್‌ಗಳನ್ನು ತಂದು ಮಲಗಿಸುತ್ತಾರೆ, ಮತ್ತೆ ಕಳುಹಿಸಿಕೊಡುತ್ತಾರೆ, ಮತ್ತೆ ಟೀಮ್ ಹೊರಟು ಹೋದ ಮೇಲೆ ರೆಕಗ್ನಿಷನ್ ತೆಗೆದುಕೊಳ್ಳುತ್ತಾರೆ, ಅದು ನಮಗೂ ಗೊತ್ತಿದೆ.

ವೈಸ್ ಚೇರ್ಮನ್:- ಮಾನ್ಯ ಸೋಮಶೇಖರವರೇ, ತಮಗೆ ಮಾತನಾಡಲು ಇನ್ನೂ ಎಷ್ಟು ಸಮಯ ಬೇಕಾಗುತ್ತದೆ.

ಶ್ರೀ ಬಿ. ಸೋಮಶೇಖರ್:- ನನಗೆ ಇನ್ನೂ ಒಂದು ಗಂಟೆ ಕಾಲಾವಕಾಶ ಬೇಕು.

ವೈಸ್ ಚೇರ್ಮನ್:- ಈಗ ಸದನವನ್ನು ನಾಳೆ 12-3-03 ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.